# ವಿದ್ಯೆಯನ್ನು ಯಾರೂ ಕದಿಯಲಾಗದು: ಶಿವರುದ್ರಸ್ವಾಮೀಜಿ

# ಗುರುಕುಲ ಮಾದರಿ ಅಕ್ಷರಾಭ್ಯಾಸಕ್ಕೆ ಚಾಲನೆ

ಅ.ಶ. ಸುದ್ದಿ ಚನ್ನಪಟ್ಟಣ

**ಚನ್ನಪಟ್ಟಣ: ಪ್ರಪಂಚದಲ್ಲಿ ವಿದ್ಯೆ ಒಂದೇ ಯಾರೂ ಕದಿಯಲಾಗದ ವಸ್ತುವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಗುಣಮಟ್ಟದ ಶಿಕ್ಷಣ ಪಡೆದು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಚನ್ನಪಟ್ಟಣದ ವಿರಕ್ತ ಮಠದ ಶ್ರೀ ಶಿವರುದ್ರ ಸ್ವಾಮೀಗಳು ಆಶೀರ್ವಚನ ನೀಡಿದರು. ತಾಲೂಕಿನ ಬೇವೂರು ಶ್ರೀ ಸಿದ್ದರಾಮೇಶ್ವರ ವಿದ್ಯಾಸಂಸ್ಥೆಯ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಮತ್ತು ಎಲ್‌ಕೆಜಿ, ಯುಕೆಜಿ ತರಗತಿಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ ದಿವ್ಯ ಸಾನಿದ್ಯ ವಹಿಸಿ ಅವರು ಮಾತನಾಡಿ, ಇಂದು ನಾವು ಗಳಿಸುವ ಹಣ, ಆಸ್ತಿ ಎಲ್ಲವನ್ನು ಯಾರು ಬೇಕಾದರೂ ಕದಿಯಬಹುದು, ಇಲ್ಲವೇ ನಾವೇ ಖರ್ಚು ಮಾಡಿ ನಾಶ ಮಾಡಬಹುದು.**

ಆದರೆ ನಾವು ಕಲಿಯುವ ವಿದ್ಯೆ ಮಾತ್ರ ನಾವು ಜೀವಂತ ಇರೋವರೆಗೆ ನಿಮ್ಮಲ್ಲೇ ಉಳಿಯುತ್ತದೆ. ನೀವು ವಿದ್ಯೆ ಕಲಿತಷ್ಟು ಕೀರ್ತಿ, ಯಶಸ್ಸು ಎಲ್ಲವೂ ನಿಮ್ಮನ್ನು ಹಿಂಬಾಲಿಸಿ ಬರುತ್ತದೆ ಎಂದರು. ನಮ್ಮ ಮಕ್ಕಳಿಗೆ ವಿದ್ಯೆ ಜೊತೆಗೆ ಸಂಸ್ಕಾರವನ್ನು ಕಲಿಸುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ಸಂಸ್ಥೆಯವರು ಗುರುಕುಲ ಪದ್ಧತಿಯಲ್ಲಿ ಪೋಷಕರಿಂದ ಮಕ್ಕಳಿಗೆ ಓಂಕಾರ ಬರೆಸಿ ಅಕ್ಷರಾಭ್ಯಾಸ ಮಾಡಿಸುತ್ತಿರುವುದು ನಮ್ಮ ಸಂಸ್ಕಾರಗಳನ್ನು ಉಳಿಸುವ ಪ್ರಯತ್ನವಾಗಿದೆ, ಈ ನಿಟ್ಟಿನಲ್ಲಿ ಇಂದು ಓಂಕಾರದ ಮೂಲಕ ಅಕ್ಷರಾಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ಆ ತಾಯಿ ಸರಸ್ವತಿ ಸಂಪೂರ್ಣವಾಗಿ ಒಲಿದು ವಿದ್ಯಾವಂತರಾಗಿ ಪೋಷಕ-ರಿಗೆ, ಶಾಲೆಗೆ ಕೀರ್ತಿ ತರಲಿ ಎಂದು ಶುಭ ಕೋರಿದರು.



ಇಂದು ಗ್ರಾಮೀಣ ಭಾಗದ ಶಾಲೆಗಳು ಖಾಸಗಿ ಶಾಲೆಗಳ ಒಡೆತಕ್ಕೆ ಮುಚ್ಚುವಂತಾಗಿದೆ. ಖಾಸಗಿ ಶಾಲೆಗಳಿಗೆ ನಿಮ್ಮ ಮಕ್ಕಳಿಗೆ ಲಕ್ಷಾಂತರ ಶುಲ್ಕ ನೀಡಿ ಶಿಕ್ಷಣ ಕೊಡಿಸಿದರೂ ಅಲ್ಲಿ ಪುಸ್ತಕದಲ್ಲಿನ ಪಾಠಕ್ಕೆ ಮಾತ್ರ ಅವರು ಒತ್ತು ಕೊಟ್ಟು ತಮ್ಮ ಶಾಲೆಗೆ ಉತ್ತಮ ಫಲಿತಾಂಶ ಪಡೆದು ಮುಂದಿನ ವರ್ಷ ಮತ್ತಷ್ಟು ಮಕ್ಕಳ ದಾಖಲಾತಿ ಟಾರ್ಗೆಟ್ ಇಟ್ಟುಕೊಳ್ಳುತ್ತಾರೆ. ಆದರೆ ನಮ್ಮ ಗ್ರಾಮೀಣ ಭಾಗದ ಶಾಲೆಗಳಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ಮೌಲ್ಯಗಳನ್ನು ಕಲಿಸಿ ಜೀವನದ ಅರ್ಥವನ್ನು ತಿಳಿಸುವ ಜೊತೆಗೆ ಪ್ರಪಂಚದ ಯಾವುದೇ ಮೂಲಗೆ ಹೋದರೂ ಜೀವನ ಮಾಡಬಲ್ಲೆ ಎಂಬ ಧರ್ಯ ತುಂಬುವ ಕೌಶಲ್ಯವನ್ನು ಕಲಿಸುತ್ತವೆ. ಈ ನಿಟ್ಟಿನಲ್ಲಿ ಈ ಶಾಲೆಗೆ ಅಕ್ಷರಾಭ್ಯಾಸಕ್ಕೆ ಬಂದಿರುವ ನಿಮ್ಮ ಮಕ್ಕಳ ಜೀವನ ಉಜ್ವಲವಾಗಲಿ ಎಂದು ಶ್ರೀಗಳು ಶುಭ ಕೋರಿದರು. ಗೌಡಗೆರೆ ಚಾಮುಂಡೇಶ್ವರಿ ಶ್ರೀಕ್ಷೇತ್ರದ ಧರ್ಮದರ್ಶಿಗಳಾದ ಡಾ.ಮಲ್ಲೇಶ್ ಗುರೂಜಿ ಅವರು ಮಾತನಾಡಿ, ಹಿಂದೆ ನಾನು ಈ ಶಾಲೆಯಲ್ಲಿ ಓದಿದ್ದು ಇಂದು ವೇದಿಕೆ ಮೇಲೆ ಕೂತು ಮಾತನಾಡುತ್ತಿದ್ದೇನೆ ಎಂದರೆ ಅದು ಈ ಶಾಲೆಯಲ್ಲಿ ನೀಡಿದ ಸಂಸ್ಕಾರ ಕಾರಣವಾಗಿದೆ.

ಮಕ್ಕಳಿಗೆ ಮನೆಯಲ್ಲೇ ಸಂಸ್ಕಾರ ಕಲಿಸಬೇಕಾದ ಪೋಷಕರು ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಅವರ ಭಾವನೆಗಳನ್ನು ಹಾಳು ಮಾಡುತ್ತಿದ್ದಾರೆ. ಅಲ್ಲದೆ ಲಕ್ಷ ಶುಲ್ಕ ಕೊಟ್ಟು ಖಾಸಗಿ ಶಾಲೆಯಲ್ಲಿ ಶಿಕ್ಷಣ ಕೊಟ್ಟರೆ ಮಾತ್ರ ನಮ್ಮ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ ಎಂಬ ಮೌಢ್ಯದಲ್ಲಿದ್ದಾರೆ. ಈ ನಿಟ್ಟಿನಲ್ಲಿ ನಿಮ್ಮ ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸುವ ಜವಾಬ್ದಾರಿಯಿಂದ ನೀವು ಮಕ್ಕಳ ಕೈನಿಂದ ಮೊಬೈಲ್ ಕಿತ್ತು ಪುಸ್ತಕ ನೀಡಿ ಅವರ ಶಿಕ್ಷಣಕ್ಕೆ ಮೊದಲ ಆದ-್ಯತೆ ನೀಡಿ ಎಂದು ಕಿವಿ ಮಾತು ಹೇಳಿದರು.

ಸಿದ್ದರಾಮೇಶ್ವರ ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸುತ್ತಾ ಬಂದಿರುವ ಬೇವೂರು ಮಠದ ಶ್ರೀ ಮೃತ್ಯುಂ-



ಜಯ ಶಿವಾಚಾರ್ಯ ಸ್ವಾಮೀಜಿಗಳು ಮಾತನಾಡಿ ನಮ್ಮ ಗುರುಗಳು ನಿರ್ಮಿಸಿದ ಈ ಶಿಕ್ಷಣ ಸಂಸ್ಥೆ ಅಭಿವೃದ್ಧಿಯತ್ತ ಸಾಗುತ್ತಿರುವುದು ಸಂತಸವಾಗಿದೆ. ಹೊಸ ಆಡಳಿತ ಮಂಡಳಿ ಸಹ ಹಳೆ ವಿದ್ಯಾರ್ಥಿಗಳ ಸಹಕಾರ ಮತ್ತು ಹಿರಿಯರ ಮಾರ್ಗದರ್ಶನ ಪಡೆದು ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಗ್ರಾಮಸ್ಥರು ತಮ್ಮ ಮಕ್ಕಳನ್ನು ಈ ಶಿಕ್ಷಣ ಸಂಸ್ಥೆ ನಮ್ಮದು ಎಂಬ ಭಾವನೆ ಇಟ್ಟುಕೊಂಡರೆ ಶಾಲೆಯೂ ಉಳಿಯುತ್ತದೆ ಗ್ರಾಮದ ಹೆಸರು ಉಳಿಯುತ್ತದೆ ಎಂದರು. ಇಂದು ಸಮಾಜದಲ್ಲಿ ಹಣ ಮಾಡುವ ಕ್ಷೇತ್ರವಾಗಿ ಶಿಕ್ಷಣ ವ್ಯವಸ್ಥೆ ಬದಲಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಮಕ್ಕಳಲ್ಲಿ ಭವಿಷ್ಯ ರೂಪಿಸುವ ಸಂಸ್ಕಾರ ಹೇಳಿಕೊಡುತ್ತಿಲ್ಲ. ಜೀವನದ ಪರಿಪಾಠ ಹೇಳಿಕೊಡುವುದಿಲ್ಲ. ಅವರು ತಮ್ಮ ಶಾಲೆಯ ಗೌರವ ಉಳಿಸಿಕೊಳ್ಳಲು ಫಲಿತಾಂಶ ಗ್ರೇಡ್ ನೀಡುತ್ತಾರೆ, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸುತ್ತಾರೆ. ಈ ನಿಟ್ಟಿನಲ್ಲಿ ನಿಮ್ಮ ಮಕ್ಕಳಿಗೆ ಇಂದು ಓಂಕಾರ ಬರೆಸಿ ಅಕ್ಷರಾಭ್ಯಾಸಕ್ಕೆ ಚಾಲನೆ ನೀಡಿರುವ ಪೋಷಕರು ನಾವು ಶಾಲೆಗೆ ಸೇರಿಸಿದ್ದೇವೆ ಎಂದು ಸುಮ್ಮನಾಗದೆ ಅವರ ಶಿಕ್ಷಣಕ್ಕೆ ಮನೆಯಲ್ಲೂ ಒತ್ತಾಸೆಯಾಗಿ ಉಳಿದ ಪಾಠ ಪ್ರವಚನ ಸಂಸ್ಕಾರ ಕಲಿಸುವ ಬಗ್ಗೆ ಶಿಕ್ಷಕರು ಜವಾಬ್ದಾರಿ ಪಡೆಯುತ್ತಾರೆ ಎಂದು ಶ್ರೀಗಳು ಶುಭ ಕೋರಿದರು. ಅಕ್ಷರಾಭ್ಯಾಸಕ್ಕೂ ಮುನ್ನ ವಿದ್ಯಾರ್ಥಿನಿಯರು ಪೂರ್ಣ ಕುಂಬ ಕಳಸದಿಂದ ಮೆರವಣಿಗೆ ಬಂದು ಸರಸ್ವತಿ ದೇವಿಗೆ ಪೂಜೆ ಸಲ್ಲಿಸಿದರು. ಈ ಕ್ಷಣ ಊರ ಹಬ್ಬದಂತೆ ಬದಲಾಗಿತ್ತು.

ಸಾಗರದ ಆಗಮ ಪ್ರವೀಣರಾದ ಗಣೇಶ್‌ಭಟ್ ಅವರು ಪ್ರೀ ಕೆಜಿ, ಎಲ್‌ಕೆಜಿ, ಯುಕೆಜಿ ವಿದ್ಯಾರ್ಥಿಗಳಿಗೆ ಮಂತ್ರಾಕ್ಷತೆಯಲ್ಲಿ ಅಕ್ಷರಗಳನ್ನು ಪೋಷಕರು ಕೈಹಿಡಿದು ಬರೆಸುವುದರ ಮೂಲಕ ಸಾಂಪ್ರದಾಯಿಕವಾಗಿ ನೆರವೇರಿಸಿ ಮಕ್ಕಳಿಗೆ ವಿದ್ಯಾರಂಭಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ವಹಿಸಿದ್ದ ವಿದ್ಯಾಸಂಸ್ಥೆಯ ಮಾಜಿ ಕಾರ್ಯದರ್ಶಿ ಬಿ.ಸಿ. ಗುರುಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಿ.ಸಿ. ಯೋಗೀಶ್‌ಗೌಡ ಕಾರ್ಯಕ್ರಮದ ನಿರೂಪಿಸಿ ಕಾರ್ಯಕ್ರದ ಆಶಯಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ದೊಡ್ಡಮಾದೇಗೌಡ, ಉಪಾಧ್ಯಕ್ಷ ಜಿತೇಂದ್ರ ಕುಮಾರ್, ಖಜಾಂಚಿ ಮನು, ರೈತ ಸಂಘದ ಕೆ ರಾಜು, ನಿರ್ದೇಶಕರುಗಳಾದ ನಿವೃತ್ತ ಉಪ ಪ್ರಾಂಶುಪಾಲರಾದ ಕೆಂಪೇಗೌಡ. ನವೀನ್‌ಕುಮಾರ್, ಚೇತನ್ ಕೆಂಪರಾಜು, ಶಿವಕುಮಾರ್, ಪ್ರಾಂಶುಪಾಲರಾದ ಡಿ.ಸಿ ಸುರೇಶ್ ಉಪ ಪ್ರಾಂಶುಪಾಲರಾದ ಗೌರಮ್ಮ, ಬೋಧಕ ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಭಾರತ– ಫ್ರಾನ್ಸ್ ಪಾಲುದಾರಿಕೆ ಮಹತ್ವದ್ದು; ಮೋದಿ

ಅ.ಶ. ಸುದ್ದಿ ಪ್ಯಾರಿಸ್

**ಪ್ಯಾರಿಸ್: ಜಿ7 ಶೃಂಗಸಭೆ ಮುಗಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ಗೆ ಆಗಮಿಸಿದ್ದಾರೆ. ಪ್ಯಾ-ರಿಸ್‌ನಲ್ಲಿ ಅವರಿಗೆ ಭಾರತೀಯರಿಂದ ಅದ್ದೂರಿ ಸ್ವಾಗತ ದೊರೆತಿದೆ. ಈ ವೇಳೆ ಮಾತನಾಡಿದ ಅವರು, ನಮ್ಮ ಗ್ರಹದ ಒಟ್ಟಾರೆ ಪ್ರಗತಿಗೆ ಭಾರತ ಮತ್ತು ಫ್ರಾನ್ಸ್ ನಡುವಿನ ಪಾಲುದಾರಿಕೆ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದ್ದಾರೆ.**



ಫ್ರೆಂಚ್ ಕಮ್ಯೂನ್ ಎವಿಯನ್–ಲೆಸ್–ಬೈನ್?ಸನಲ್ಲಿ ನಡೆದ ಜಿ7 ಶೃಂಗಸಭೆಯಲ್ಲಿ ಅತಿಥಿ ರಾಷ್ಟ್ರವಾಗಿ ಭಾರತ ಭಾಗವಹಿಸಿತ್ತು. ಅಲ್ಲಿನ ಕಾರ್ಯಕ್ರಮಗಳನ್ನು ಮುಗಿಸಿ ಮೋದಿ ಪ್ಯಾರಿಸ್‌ಗೆ ಆಗಮಿಸಿದ್ದಾರೆ. ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿ ಅವರು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಯುರೋಪಿನ ಅತಿದೊಡ್ಡ ತಂತ್ರಜ್ಞಾನ ಮೇಳವಾದ ವಿವಾಟೆಕ್ 2026 ನಲ್ಲಿ ಭಾಗವಹಿಸಲಿದ್ದಾರೆ. ಜಾಗತಿಕ ಸಮೃದ್ಧಿಯನ್ನು ಸಾಧಿಸಲು ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ (ಗ್ಲೋಬಲ್ ಸೌತ್) ನಿಕಟ ಸಂಬಂಧ ಹೊಂದುವುದು ಅಗತ್ಯ ಎಂದು ಮೋದಿ ಒತ್ತಿಹೇಳಿದರು. ಜಿ7 ದೇಶಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಬಲವನ್ನು ಒಟ್ಟುಗೂಡಿಸಿ ವ್ಯಾಪಾರ ಹಾಗೂ ಸಂಪರ್ಕವನ್ನು ಹೆಚ್ಚಿಸುವ ಹೊಸ ಚೌಕಟ್ಟನ್ನು ಮೋದಿ ಪ್ರಸ್ತಾಪಿಸಿದರು. \ಶೃಂಗಸಭೆಯ ನಡುವೆ ಪ್ರಧಾನಿ ಮೋದಿ ಅವರು ವಿಶ್ವದ ಪ್ರಮುಖ ನಾಯಕರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಅಮೆರಿಕ ಅಧ್ಯಕ್ಷ ಡೊನಾಲ್?ಡ ಟ್ರಂಪ್‌ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್‌ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿಜರ್ಮನ್ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಮತ್ತು ಯುಎಇ ಅಧ್ಯಕ್ಷರುಉಭಯ ದೇಶಗಳು ರಕ್ಷಣೆ, ಭದ್ರತೆ, ಬಾಹ್ಯಾಕಾಶ, ನಾಗರಿಕ ಪರಮಾಣು ಶಕ್ತಿ ಮತ್ತು ಹವಾಮಾನ ಬದಲಾವಣೆಯ ತಡೆಗೆ ಸಂಬಂಧಿಸಿದಂತೆ ಬಲವಾದ ಕಾರ್ಯತಂತ್ರದ ಪಾಲುದಾ-ರಿಕೆಯನ್ನು ಹೊಂದಿವೆ. ಪ್ರಸ್ತುತ ಫ್ರಾನ್ ಸನಲ್ಲಿ ಸುಮಾರು 1.19 ಲಕ್ಷಕ್ಕೂ ಅಧಿಕ ಭಾರತೀಯರು ವಾಸಿಸುತ್ತಿದ್ದಾರೆ.

# ಮೊಹರಂ ಹಬ್ಬ: ಶಾಂತಿ ಸಭೆ



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಮುಂಬರುವ ಮೊಹರಂ ಹಬ್ಬದ ಪ್ರಯುಕ್ತ ಗಂಗಾವತಿ ಪೊಲೀಸ್ ಉಪವಿಭಾಗಾಧಿಕಾರಿಗಳ ಕಚೇರಿ ಆವರಣದಲ್ಲಿ ಶಾಂತಿ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಮಾತನಾಡಿ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿಯುತವಾಗಿ, ಸೌಹಾರ್ದಯುತವಾಗಿ ಆಚರಿಸಬೇಕು ಎಂದು ಕರೆ ನೀಡಿದರು.**

ಯಾವುದೇ ರೀತಿಯ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಸಾರ್ವಜನಿಕರು ಹಾಗೂ ವಿವಿಧ ಸಮುದಾಯಗಳ ಮುಖಂಡರು ಪೊಲೀಸರೊಂದಿಗೆ ಸಹಕ-ರಿಸಬೇಕು ಎಂದು ಮನವಿ ಮಾಡಿದರು. ಹಬ್ಬದ ಸಂದರ್ಭದಲ್ಲಿ ಮೆರವಣಿಗೆಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿಗದಿತ ನಿಯಮಗಳ ಅನುಸಾರ ನಡೆಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ, ಪ್ರಚೋದನಕಾರಿ ಸಂದೇಶಗಳು ಅಥವಾ ವದಂತಿಗಳನ್ನು ಹರಡುವುದನ್ನು ತಪ್ಪಿಸಿ, ಯಾವುದೇ ಅನುಮಾನಾಸ್ಪದ ಘಟನೆಗಳು ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವಂತೆ ತಿಳಿಸಿದರು.

ಸಾರ್ವಜನಿಕರ ಸುರಕ್ಷತೆ ಮತ್ತು ಶಾಂತಿ ಕಾಪಾಡಲು ಪೊಲೀಸ್ ಇಲಾಖೆ ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದು, ಎಲ್ಲರ ಸಹಕಾರದಿಂದ ಮೊಹರಂ ಹಬ್ಬವನ್ನು ಯಶಸ್ವಿಯಾಗಿ ಆಚ-ರಿಸೋಣ ಎಂದು ಡಿವೈಎಸ್ಪಿ ಜೆ.ಎಸ್.ನ್ಯಾಮಗೌಡರ್ ಹೇಳಿದರು. ಸಭೆಯಲ್ಲಿ ಗಂಗಾವತಿ ನಗರ ಠಾಣೆ ಪಿಐ ಪ್ರಕಾಶ ಯಾತನೂರು, ಪಿಎಸ್‌ಐ ಟಿ.ಜಿ.ನಾಗರಾಜ, ಎ.ಎಸ್.ಐ ವೀರೇಶ, ನಗರಸಭೆ ಆರೋಗ್ಯ ನೀರಿಕ್ಷಾಧಿಕಾರಿ ನಾಗರಾಜ, ಪೊಲೀಸ್ ಸಿಬ್ಬಂದಿಗಳಾದ ಮಹೇಶ, ಫಕೀರಪ್ಪ, ಮ-ರಿಶಂತಗೌಡ, ಹಾಗೂ ವಿವಿಧ ಗ್ರಾಮದಿಂದ ಗುರು ಹಿರಿಯರು ಯುವಕರು ಸೇರಿದಂತೆ ಇತರರು ಇದ್ದರು.

## ಯುವಪೀಳಿಗೆಗೆ ಮೂಲ ಜಾನಪದವನ್ನು ಉಳಿಸಬೇಕಿದೆ: ಮಾರುತಿ ಚಾಮಲಾಪುರ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ?ಬೆಂಗಳೂರು, ನಾದಯೋಗಿ ಸಂಗೀತ ಹಾಗೂ ಸಾಂಸ್ಕೃತಿಕ ಸಂಸ್ಥೆ (ರಿ) ಶರಣಬಸವೇಶ್ವರನಗರ ಗಂಗಾವತಿ ಇವರ ಸಂಯುಕ್ತ ಆಶ್ರಯದಲ್ಲಿ 2025–26ನೇ ಸಾಲಿನ ಸಾಮಾನ್ಯ ಯೋಜನೆ ಧನ ಸಹಾಯದ ಅಡಿಯಲ್ಲಿ (ಸುಗಮ ಸಂಗೀತ ಸಂಭ್ರಮ) ಕಾರ್ಯಕ್ರಮವು ಚಳ್ಳಾರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸರಸ್ವತಿ ಕಲಾಮಂದಿರದಲ್ಲಿ ಜರುಗಿತು.**

ಕಾರ್ಯಕ್ರಮದ ಉದ್ಘಾಟನೆಯನ್ನು ವಕೀಲರಾದ ಮಾರುತಿ ಚಾಮಲಾಪುರ ಅವರು ಮಾತನಾಡಿ ಈಗಿನ ಕಾಲದಲ್ಲಿ ಸಂಗೀತ ಎನ್ನುವುದು ನಶಿಸಿ ಹೋಗುತ್ತಿದೆ. ಪ್ರತಿಯೊಂದು ಮಕ್ಕಳು ಶಾಸ್ತ್ರಬದ್ಧವಾಗಿ ಸಂಗೀತ ಕಲಿಯಬೇಕು ಹಾಗೂ ಶಾಸ್ತ್ರಬದ್ಧವಾಗಿ ಹಾಡುವುದನ್ನು ಕಲಿಯಬೇಕು. ಪ್ರತಿಯೊಂದು ಹಳ್ಳಿಯಲ್ಲಿ ಸಂಗೀತದ ಅರಿವು ಮೂಡಬೇಕು. ಈಗಿನ ಯುವಪೀಳಿಗೆಯಲ್ಲಿ ಯುವಕರು ಅಶ್ಲೀಲ ಜಾನಪದವನ್ನು ಹಾಡುವುದನ್ನು ಬಿಟ್ಟು, ಮೂಲಜಾನಪದವನ್ನು ಕಾಪಾಡಬೇಕಿದೆ ಎಂದು ಕರೆ ನೀಡಿದರು.



ಕರೋಕೆ ಜಾನಪದವನ್ನು ಸರ್ಕಾರ ನಿಷೇಧಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಾಸ್ತಾವಿಕ ನುಡಿಯನ್ನು ಶಾಲೆಯ ಮುಖ್ಯ ಶಿಕ್ಷಕ ಯೋಗ ನರಸಿಂಹ ಪಿಕೆವಹಿಸಿ ಮಾತನಾಡಿ ಅವರು ಇದ್ದದ್ದನ್ನು ಇಲ್ಲದಂಗ ತೋರಿಸುವುದು ಸಿನಿಮಾ ರಂಗ, ಇದ್ದದ್ದನ್ನು ಇದ್ದಹಾಗೆ ತೋ-ರಿಸುವುದು ರಂಗಭೂಮಿ, ರಂಗಭೂಮಿಯ ಕಲೆ ಉಳಿಸಿ, ಬೆಳೆಸಿ, ಹಿಂದಿನ ಹಳ್ಳಿಯ ಸೊಗಡಿನಿಂದ ಜಾನಪದಗಳು, ಭಾವಗೀತೆಗಳು ರಂಗಗೀತೆಗಳು, ಸಾಹಿತ್ಯ ರೂಪದಲ್ಲಿ ಮೂಡಿಬರುತ್ತಿದ್ದವು. ಅದೇ ರೂಪವಾಗಿ ಮಕ್ಕಳಲ್ಲಿ, ಅದೇ ಸಂಸ್ಕೃತಿಯನ್ನು ಶಿಕ್ಷಕರು ಪಾಲಕರು ಮೂಡಿಸಬೇಕು. ನಿಜವಾದ ಸಂಗೀತವನ್ನು ಪೋಷಿಸಿ ಉಳಿಸಿ ಎಂದು ಹೇಳಿದರು.

ಅಧ್ಯಕ್ಷತೆಯನ್ನು ಶಾಲೆಯ ಎಸ್.ಡಿ. ಎಂ.ಸಿ ಅಧ್ಯಕ್ಷ ಯಮನೂರಪ್ಪ ಗುದಗಿನ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರಣ್ ಕುಮಾರ್, ಶಾಲೆಯ ಎಸ್.ಡಿ.ಎಂ.ಸಿ ಸದಸ್ಯರಾದ ಗುನ್ನಪ್ಪ ಗುಮಗೇರಿ, ಹಿರೇಬೊಮ್ಮನಾಳ ಗ್ರಾಮದ ಸ.ಹಿ.ಪ್ರಾ ಶಾಲೆಯ ಮುಖ್ಯ ಶಿಕ್ಷಕ ಯಲ್ಲಪ್ಪ ಚೆನ್ನಮಟ್ಟಿ, ಪತ್ರಕರ್ತ ಅಲ್ಲಾಭಕ್ಷಿ ಚಳ್ಳಾರಿ, ಶಿಕ್ಷಕರಾದ ಯಮನೂರ ಮುಲ್ಲಾರ್, ಬಸವನಗೌಡ ಪೊಲೀಸ್ ಪಾಟೀಲ್, ಮಾಜಿ ತಾ.ಪಂ ಅಧ್ಯಕ್ಷ ಹನುಮಗೌಡ ಮಾಲಿಪಾಟೀಲ್, ಚಳ್ಳಾರಿ ಗ್ರಾ.ಪಂ ಸದಸ್ಯ ನಿಂಗನಗೌಡ ಪೊಲೀಸ್ ಪಾಟೀಲ್ ವಹಿಸಿದ್ದರು.

ಸಂಗೀತ ಕಾರ್ಯಕ್ರಮದಲ್ಲಿ ದಾಸವಾಣಿಯನ್ನು ಅಂತರಾಷ್ಟ್ರೀಯ ಕಲಾವಿದ ಹಾಗೂ ಗದಗ ವಿರೇಶ್ವರ ಪುಣ್ಯಾಶ್ರಮದ ಸಂಗೀತ ಶಿಕ್ಷಕರಾದ ಮಾರುತಿ ಬಿನ್ನಾಳ ದೊಡ್ಮನಿ, ವಚನ ಗಾಯನವನ್ನು ಹಿರಿಯ ಕಲಾವಿದರಾದ ರಾಮಚಂದ್ರಪ್ಪ ಉಪ್ಪಾರ ಕೊಪ್ಪಳ, ಜಾನಪದವನ್ನು ಅಂತರಾಷ್ಟ್ರೀಯ ಕಲಾವಿದರಾದ ಮರಿಯಪ್ಪ ಚಾಮಲಾಪುರ, ತತ್ವಪದವನ್ನು ಆಕಾಶವಾಣಿ ಕಲಾವಿದರಾದ ಶರಣಪ್ಪ ಗಂಗಾವತಿ, ಕಲಾವಿದರಾಗಿ ಶೇಖರಗೌಡ ಮ್ಯಾದನೇರಿ, ರೋಹಿತ್ ಕೊಪ್ಪಳ ನಡೆಸಿಕೊಟ್ಟರು. ಕೀಬೋರ್ಡನ್ನು ರಾಮಚಂದ್ರಪ್ಪ ಉಪ್ಪಾರ ಕೊಪ್ಪಳ ನುಡಿಸಿದರೆ, ತಬಲಾವನ್ನು ಗದಗ ವಿರೇಶ್ವರ ಪುಣ್ಯಾಶ್ರಮದ ಪ್ರಭು ದೊಡ್ಮನಿ, ರಿದಂ ಪ್ಯಾಡನ್ನು ಶ್ರೀಕಾಂತ ಚಿಕ್ಕಸೂಳಿಕೇರಿ ಅವರು ನುಡಿಸಿದರು. ನಂತರ ಶಾಲಾ ಮಕ್ಕಳಿಂದ ನೃತ್ಯ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮದಲ್ಲಿ ಊರಿನ ಗುರು ಹಿರಿಯರು ಪಾಲ್ಗೊಂಡು ಈ ಯಶಸ್ವಿಗೊಳಿಸಿದರು.

# 5ನೇ ವರ್ಷದ ನವ ಬೃಂದಾವನ ಪಾದಯಾತ್ರೆ ಸಂಪನ್ನ




ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ಹಿರೇಜಂತಕಲ್ ವಿರೂಪಾಪುರದ ಆರ್ಯವೈಶ್ಯ ಸಮಾಜದ ವತಿಯಿಂದ ಆಯೋಜಿಸಲಾಗಿದ್ದ 5ನೇ ವರ್ಷದ ನವ ಬೃಂದಾವನ ಪಾದಯಾತ್ರೆಯು ಭಕ್ತಿಪೂರ್ವಕವಾಗಿ ನೆರವೇರಿತು.** ನಗರದ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಮಹಾಮಂಗಳಾರತಿಯೊಂದಿಗೆ ಪಾದಯಾತ್ರೆಗೆ ಚಾಲನೆ ನೀಡಲಾಯಿತು.

ಸಮಾಜದ ಅಧ್ಯಕ್ಷರಾದ ದರೋಜಿ ನಾಗರಾಜ ಶ್ರೇಷ್ಠಿ ಅವರ ನೇತೃತ್ವದಲ್ಲಿ ಹಾಗೂ ಗುರುಗಳಾದ ಗುರು ಭೀಮ್ ಭಟ್ ಜೋಶಿ ಅವರ ಮಾರ್ಗದರ್ಶನದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

### ಭಕ್ತಿ ಸಂಭ್ರಮ

**ಪಾದಯಾತ್ರೆಯುದ್ದಕ್ಕೂ ಭಕ್ತರು ಭಜನೆ ಮತ್ತು ದೇವರ ನಾಮಸ್ಮರಣೆಯೊಂದಿಗೆ ಸಾಗಿದರು. ದಾರಿ ಮಧ್ಯೆ ದಾನಿಗಳು ಹಣ್ಣು, ಚಹಾ ಮತ್ತು ಬಿಸ್ಕೆಟ್ ವಿತರಿಸಿ ಭಕ್ತರಿಗೆ ಸಾಥ್ ನೀಡಿದರು. ಜಗದೀಶ ಶ್ರೇಷ್ಠಿ ಕಡೆಬಾಗಿಲು ಅವರು ಲಘು ಉಪಹಾರದ ವ್ಯವಸ್ಥೆಯನ್ನು ಮಾಡಿದರೆ, ಬದ್ರಿನಾಥ ಆನೆಗುಂದಿ ಅವರು ಭಕ್ತರಿಗೆ ಮಹಾಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಿದ್ದರು.**

### ಪೂಜಾ ಕೈಂಕರ್ಯಗಳು

**ಆನೆಗುಂದಿಯ ನವ ಬೃಂದಾವನಕ್ಕೆ ತಲುಪಿದ ನಂತರ, 9 ಯತಿವರೇರಿಗೆ ಅಲಂಕಾರ, ಪಂಚಾಮೃತ ಅಭಿಷೇಕ ಮತ್ತು ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ನಂತರ ಭಜನಾ ಮಂಡಳಿಯಿಂದ ವಿಶೇಷ ಭಜನಾ ಕಾರ್ಯಕ್ರಮ ನಡೆಯಿತು. ನವ ಬೃಂದಾವನ ಭಜನಾ ಮಂಡಳಿ ಅಧ್ಯಕ್ಷ ದರೋಜಿ ನರಸಿಂಹ ಶ್ರೇಷ್ಠಿ, ಮಹಿಳಾ ಮಂಡಳಿ ಅಧ್ಯಕ್ಷೆ ರುಕ್ಮಿಣಿ, ವಾಸವಿ ಯುವಜನ ಅಧ್ಯಕ್ಷ ಮಂಜುನಾಥ ಹಾಗೂ ಸಮುದಾಯದ ಪ್ರಮುಖರಾದ ಸಂಜೀವ ಕುಮಾರ ರಾಯಚೂರು, ಬೆನ್ನೂರ ಪ್ರಹ್ಲಾದ, ದರೋಜಿ ವೆಂಕಟೇಶ, ದಮ್ಮೂರ್ ಸುರೇಶ, ಹಣವಾಳ ಚಂದ್ರಶೇಖರ, ಜಿ.ಆರ್.ಎಸ್. ಸತ್ಯನಾರಾಯಣ, ಗುಂಡೂರು ಪ್ರಹ್ಲಾದ, ವಿಜಯ ಕುಮಾರ, ಸಿ.ಎಂ. ಸಂದೀಪ, ಅಳವಂಡಿ ಮಂಜುನಾಥ.ರಾಕೇಶ್ ಸೇರಿದಂತೆ ಮಹಿಳಾ ಮಂಡಳಿಯ ಸದಸ್ಯರಾದ ದರೋಜಿ ರೇಖಾ. ದಮ್ಮೂರ್ ಮಂಜುಳ. ಸುಮಲತಾ. ದರೋಜಿ ದೀಪಾ ಸರಸ್ವತಿ. ಲಕ್ಷ್ಮಿ ಹಣವಾಳ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಆರ್ಯವೈಶ್ಯ ಸಮಾಜ ಬಾಂಧವರು ಉಪಸ್ಥಿತರಿದ್ದರು.**

# ಲೇಖಕರ ದಿನಚರಿ...

## ಪುಸ್ತಕಗಳು ಬದಲಿಸಿದ ಬದುಕು



"ಕೆಲವು ಪುಸ್ತಕಗಳು ಸಮಯ ಕಳೆಯಲು ಸಿಗುತ್ತವೆ, ಕೆಲವು ಪುಸ್ತಕಗಳು ಬದುಕನ್ನೇ ಬದಲಿಸಲು ಸಿಗುತ್ತವೆ"

ಎಂಬುದು ನೂರಕ್ಕೆ ನೂರು ಸತ್ಯವಾಗಿದೆ. ಅಂಗುಲಿಮಾಲ ನಂತಹ ಕ್ರೂರಿ ಬುದ್ಧನ ನಗು, ಸಹನೆ, ಪ್ರೀತಿಯ ಬೋಧನೆಯಿಂದ ಬದಲಾದ ಎಂಬುದನ್ನು ಓದಿದಾಗ ಅವರ ಪ್ರಭಾವ ಅವನ ಮೇಲಾದ ಪರಿಣಾಮ ಎಷ್ಟರಮಟ್ಟಿಗೆ ಇರಬಹುದು ಅಲ್ಲವೇ, ಇದೇ ಪರಿಣಾಮವನ್ನು ಪುಸ್ತಕಗಳು ಬೀರುತ್ತವೆ ಎಂದರೆ ಅತಿಶಯೋಕ್ತಿ ಆಗಲಾರದು. ಅಂದು ಕೇವಲ ಒಬ್ಬ ಅಂಗುಲಿಮಾಲ, ಇಂದು ಅಂತಹ ವ್ಯಕ್ತಿತ್ವ ಇರುವವರು ಲೆಕ್ಕವೇ ಇಲ್ಲ.

ಬೋಧನೆ ಮಾಡಲು ಬುದ್ಧರು ಸಿಗುವುದಿಲ್ಲ. ಆದರೆ ಗೌತಮ ಬುದ್ಧನ ವಿಚಾರಗಳ ಪ್ರಭಾವ ಮತ್ತು ಅವರ ಬೋಧನೆಗಳಿರುವ ಪುಸ್ತಕಗಳು ಓದುಗರ ಮೇಲೆ ಸಾಕಷ್ಟು ಪರಿಣಾಮ ಬೀರುತ್ತವೆ.ಇಡೀ ಜಗತ್ತಿನ ಇತಿಹಾಸವನ್ನೇ ಪುಸ್ತಕಗಳು ನಮ್ಮ ಕಣ್ಣೇದುರು ಬಿಂಬಿಸುತ್ತವೆ.. **Jorge Luis Borges** ಅವರು ಹೇಳುವಂತೆ: "ಸ್ವರ್ಗದ ಬಗ್ಗೆ ನಾನು ಕಲ್ಪಿಸಿಕೊಂಡದ್ದು ಒಂದು ಸುಂದರ ಗ್ರಂಥಾಲಯದ ರೂಪದಲ್ಲೇ!" ಈ ನುಡಿಗಳು ಎಷ್ಟು ಅರ್ಥಪೂರ್ಣವಾಗಿವೆ.

ಸ್ವರ್ಗವೆಂದರೆ ಕೇವಲ ಸಂತೋಷ ಮತ್ತು ಸುಖದ ಜಾಗವೆಂದು ನಮ್ಮ ಕಲ್ಪನೆಯಲ್ಲಿದೆ. ಪುಸ್ತಕಗಳ ಸಂಗ್ರಹವಿರುವ ಗ್ರಂಥಾಲಯ ಸ್ವರ್ಗಕ್ಕೆ ಸಮಾನ, ಪುಸ್ತಕಗಳು ನೀಡುವ ನೆಮ್ಮದಿ ಮತ್ತು ಸಂತೋಷವನ್ನು ಬೇರೇನೂ ಕೊಡಲು ಸಾಧ್ಯವಿಲ್ಲ. ಹಾಗಾಗಿ ಪ್ರತಿಯೊಬ್ಬರ ಮೊದಲ ಆಯ್ಕೆ ಪುಸ್ತಕವೇ ಆಗಿರಬೇಕು. ಪುಸ್ತಕವೆಂಬುದು ಕೇವಲ ಹಾಳೆಗಳ ಗುಚ್ಛವಲ್ಲ, ಅದರಲ್ಲಿ ಬರಹಗಾರರ ಅತಿ ಅಮೂಲ್ಯವಾದ ಅನುಭವಗಳಿರುತ್ತವೆ. ಅದರಲ್ಲಿ ನೂರಾರು ಉತ್ತಮ ವಿಚಾರಧಾರೆಗಳಿರುತ್ತವೆ, ಅವು ನಮ್ಮ ಜ್ಞಾನದ ಹರವನ್ನು ತಾವಾಗಿಯೇ ವಿಸ್ತರಿಸುತ್ತವೆ. ಪುಸ್ತಕಗಳ ಅಧ್ಯಯನದಿಂದ ಜ್ಞಾನದೀಪ ಬೆಳಗಲು ಪ್ರಾರಂಭಿಸಿ ಬದುಕಿಗೂ ದಾರಿದೀಪವಾಗುತ್ತದೆ.

ಪುಸ್ತಕಕ್ಕೆ ಮಸ್ತಕವನ್ನೇ ಬದಲಾಯಿಸುವ ಮಹಾ ಶಕ್ತಿ ಇದೆ ಪುಸ್ತಕಗಳ ನಿರಂತರ ಅಧ್ಯಯನದಿಂದ ಜ್ಞಾನದ ಜೊತೆಗೆ ನಮ್ಮ ಆಲೋಚನಾ ಶಕ್ತಿಯೂ ಪ್ರಾವೀಣ್ಯತೆಯನ್ನು ಪಡೆದುಕೊಳ್ಳುತ್ತದೆ. . ಪುಸ್ತಕಗಳಿಗೆ ಮನುಷ್ಯನ ಮನಸ್ಸನ್ನು ಮತ್ತು ಅವನ ಬದುಕನ್ನೇ ಸಂಪೂರ್ಣವಾಗಿ ಬದಲಾಯಿಸುವಂತಹ ಶಕ್ತಿ ಇದೆ. "ದೇಶ ಸುತ್ತು ಇಲ್ಲ ಕೋಶ ಓದು" ಎಂದು ಹಿರಿಯರು ಹೇಳಿದ ಗಾದೆ ಮಾತು ಎಂದಿಗೂ ಸುಳ್ಳಾಗುವುದಿಲ್ಲ. ಬದುಕಿನ ಸತ್ಯವನ್ನು ಮತ್ತು ಜ್ಞಾನವನ್ನು ನಾವು ಹೆಚ್ಚಿಸಿಕೊಳ್ಳಬೇಕೆಂದರೆ ಪ್ರತಿಯೊಬ್ಬರಿಗೂ ಪುಸ್ತಕಗಳ ಅಧ್ಯಯನ ಅವಶ್ಯಕವಾಗಿದೆ. ಓದುವಿಕೆಯು ನಮ್ಮನ್ನು ಅನೇಕ ಉತ್ತಮ ಚಿಂತನೆಗಳಿಗೆ ಹಚ್ಚುತ್ತದೆ, ಆತ್ಮ ವಿಮರ್ಶೆಗೆ ದಾರಿ ಮಾಡಿಕೊಡುತ್ತದೆ. ಪುಸ್ತಕಗಳು ನಮ್ಮನ್ನು ದೂರಾಲೋಚನೆಗಳಿಂದ ಮತ್ತು ನಕಾರಾತ್ಮಕ ಯೋಚನೆಗಳಿಂದ ದೂರವಿರಿಸಿ, ಮನಸ್ಸಿನಲ್ಲಿ ಸದಾ ಧನಾತ್ಮಕ ಚಿಂತನೆ ಮೂಡುವಂತೆ ಮಾಡುತ್ತವೆ.

ಇದು ವ್ಯಕ್ತಿತ್ವ ವಿಕಸನಕ್ಕೆ ಪ್ರಮುಖ ದಾರಿಯಾಗುತ್ತದೆ. .ಪುಸ್ತಕಗಳ ಆಯ್ಕೆ ಎಂಬುದು ಅವರವರ ವೈಯಕ್ತಿಕ ಆಸಕ್ತಿಗೆ ಬಿಟ್ಟದ್ದು. ಆದರೆ ಉತ್ತಮ ಪುಸ್ತಕಗಳು ಯಾವಾಗಲೂ ಒಬ್ಬ ಶ್ರೇಷ್ಠ ಸ್ನೇಹಿತನಂತೆ ನಮ್ಮ ಬದುಕಿನ ಬದಲಾವಣೆಗೆ ಸದಾ ನೆರವಾಗುತ್ತವೆ. ಆದ್ದರಿಂದ ನಮ್ಮ ಮನಸ್ಸಿಗೆ ಒಳ್ಳೆಯದನ್ನು ಉಂಟುಮಾಡುವ ಪುಸ್ತಕಗಳನ್ನೇ ನಾವು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅತ್ಯುತ್ತಮ ಸಾಧಕರ ಜೀವನ ಚರಿತ್ರೆ ಮತ್ತು ಅವರ ವಿಚಾರಧಾರೆಗಳನ್ನು ಓದಿದಾಗ, ಅವರ ಆದರ್ಶಗಳಂತೆ ನಾವೂ ಇರಬೇಕೆಂಬ ಹಂಬಲ ನಮ್ಮಲ್ಲಿ ಹೆಚ್ಚುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್‌ಗಳ ಬಳಕೆ ಇಲ್ಲದೆ ಜಗತ್ತೇ ಇಲ್ಲದಂತಾಗಿದೆ. ಆದರೆ ಪುಸ್ತಕಗಳನ್ನು ಓದುವ ಹವ್ಯಾಸ ಇತ್ತೀಚಿನ ದಿನಗಳಲ್ಲಿ ತುಂಬಾ ಇಳಿಮುಖವಾಗಿದೆ.


ಇದು ಅತ್ಯಂತ ಬೇಸರದ ಸಂಗತಿಯಾಗಿದೆ. ಓದುವ ಹವ್ಯಾಸ ಇಟ್ಟುಕೊಂಡರೆ ಮಾತ್ರ ನಮಗೆ ಸಾಹಿತ್ಯದ ಜ್ಞಾನ ಮತ್ತು ಲೋಕದ ತಿಳಿವಳಿಕೆ ಸಿಗುತ್ತದೆ. ನಮ್ಮ ದಿನನಿತ್ಯದ ಬದುಕಿನ ದಿನಚರಿಯಲ್ಲಿ ಓದುವಿಕೆಯನ್ನು ರೂಢಿಸಿಕೊಂಡರೆ ಯಶಸ್ಸು ತಾನಾಗಿಯೇ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಓದುವ ಅನುಭವ ಯಾವುದೇ ಸಾಮಾಜಿಕ ಜಾಲತಾಣಗಳಿಂದ ಸಿಗುವುದಿಲ್ಲ, ಓದಿ ಅನುಭವಿಸಿದಾಗಲೇ ಅದರ ಮಹತ್ವ ,ಮರ್ಮ ತಿಳಿಯುತ್ತದೆ.

ಇತ್ತೀಚಿನ ದಿನಗಳಲ್ಲಿ "ಮನೆಗೊಂದು ಗ್ರಂಥಾಲಯ" ಎಂಬ ಅಭಿಯಾನವು ಸಮಾಜದಲ್ಲಿ ಎಷ್ಟರ ಮಟ್ಟಿಗೆ ತನ್ನ ಪ್ರಭಾವ ಬೀರಿದೆ ಎಂದರೆ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಸರ್ ರವರು ಹಮ್ಮಿಕೊಂಡಿರುವ ಈ ಅನುಷ್ಠಾನ ಹಳ್ಳಿ-ಹಳ್ಳಿಗಳಲ್ಲೂ ಹಬ್ಬುತ್ತಿದೆ. ಇದು ಇಂದಿನ ಜನರಲ್ಲಿ ಪುಸ್ತಕಗಳ ಕಡೆಗೆ ಮತ್ತೆ ಆಸಕ್ತಿ ಮೂಡುವಂತೆ ಮಾಡುತ್ತಿದೆ."ಪುಸ್ತಕಗಳಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ" ಎಂಬ ಮಾತು ನೂರಕ್ಕೆ ನೂರು ಸತ್ಯವಾಗಿದೆ.

ಮನೆಯಲ್ಲಿ ಸಾಲಾಗಿ ಜೋಡಿಸಿಟ್ಟಿರುವ ಪುಸ್ತಕಗಳನ್ನು ನೋಡಿದಾಗ ಮನಸ್ಸಿಗೆ ಎಲ್ಲೋ ಒಂದು ಕಡೆ ಅಪಾರ ತೃಪ್ತಿ ಮತ್ತು ಸಂತೋಷ ಸಿಗುತ್ತದೆ. ಪುಸ್ತಕಗಳು ಮೌನವಾಗಿ ಮಾತನಾಡಬಲ್ಲ ಜ್ಞಾನ ಭಂಡಾರ ಇದ್ದ ಹಾಗೆ. ಅದರ ಬೆಲೆ ತಿಳಿದವರಿಗೆ ಮಾತ್ರ ಗೊತ್ತು.ಪುಸ್ತಕಗಳು ಬದುಕಿನ ಅನೇಕ ಕಠಿಣ ತಿರುವುಗಳಿಗೆ ಬೆಳಕಿನ ಪಂಜುಗಳಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಗಂಟೆಗಟ್ಟಲೆ ಸಮಯ ಕಳೆಯುವ ಬದಲು, ಕೈಲೊಂದು ಪುಸ್ತಕ ಹಿಡಿದು ಓದಿದರೆ ನಮ್ಮಲ್ಲಿ ಆಗುವ ಸಕಾರಾತ್ಮಕ ಬದಲಾವಣೆಯನ್ನು ನಾವೇ ಕಂಡುಕೊಳ್ಳಬಹುದು. ಇದರಿಂದ ನಮ್ಮಲ್ಲಿ ಮಾತನಾಡುವ ರೀತಿ ನೀತಿ, ಹಾವಭಾವಗಳು, ಸಂಸ್ಕಾರಯುತ ಬದಲಾವಣೆಗಳು ಉಂಟಾಗುತ್ತವೆ.

ನಮ್ಮ ಸಾಹಿತ್ಯ ಲೋಕದಲ್ಲಿ ವಿಭಿನ್ನವಾದ ಪುಸ್ತಕಗಳಿವೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ಇತಿಹಾಸದ ಚರಿತ್ರೆಗಳು, ಕಾದಂಬರಿಗಳು, ಮಕ್ಕಳ ವಿಭಿನ್ನ ರೀತಿಯ ಕಥೆಗಳು, ವಿಜ್ಞಾನದ ಪುಸ್ತಕಗಳು ಮತ್ತು ಪ್ರಬಂಧಗಳು?ಹೀಗೆ ಪ್ರತಿಯೊಂದು ಪುಸ್ತಕವೂ ಸಾಹಿತ್ಯದ ಮುತ್ತುಗಳಂತೆ ಬಗೆದಷ್ಟು ಅಗೆದಷ್ಟು ಸಾಹಿತ್ಯವೆಂಬ ಶರಧಿಯ ಒಡಲಿನಲ್ಲಿ ಅಮೂಲ್ಯವಾದ ಮುತ್ತು ರತ್ನಗಳನ್ನು ಹೊಂದಿದ್ದು, ಓದುಗರಲ್ಲಿ ಕುತೂಹಲವನ್ನು ಹೆಚ್ಚಿಸುತ್ತಾ ಹೋಗುತ್ತವೆ. ಪುಸ್ತಕದ ಪ್ರತಿಯೊಂದು ಪುಟಗಳು ನಮಗೆ ಜೀವನದ ಒಂದೊಂದು ಹೊಸ ಪಾಠವನ್ನು ಕಲಿಸುತ್ತಾ ಸಾಗುತ್ತವೆ.

ಪುಸ್ತಕವನ್ನು ಓದುವವರು ಸದಾ ವಿನಯದಿಂದ ತಲೆಬಾಗಿಸಿ ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಾರೆ. ಕೇವಲ ಪುಸ್ತಕ ಕಲಿಯುವುದಕ್ಕಷ್ಟೇ ಅಲ್ಲ, ಅದರ ಜೊತೆಗೆ ಬದುಕನ್ನು ಅರ್ಥಮಾಡಿಕೊಳ್ಳುವ ಶ್ರೇಷ್ಠ ಪಾಠವನ್ನು ಕಲಿಸುತ್ತದೆ.ಒಟ್ಟಿನಲ್ಲಿ ಪುಸ್ತಕಗಳನ್ನು ಓದುತ್ತಾ ಓದುತ್ತಾ ಮನುಷ್ಯನಲ್ಲಿ ಒಂದು ಮೌಲ್ಯಯುತವಾದ ದೃಷ್ಟಿಕೋನ ಮೂಡುತ್ತದೆ ಮತ್ತು ಅವನ ಬದುಕಿನ ದಾರಿಯೇ ಬದಲಾಗಿ ಹೋಗುತ್ತದೆ.



ಡಾ ರೇಖಾ ಉದಯ್

## ಬದುಕು..



ದೇವನಿತ್ತ ಈ ಬದುಕು
ಹೇಗೇ ಇರಲಿ ಅದು
ಅವನಿತ್ತ ಮಹಾ ಪ್ರಸಾದವು
ನನ್ನ ಪಾಲಿನ ಪಂಚಾಮೃತವು...

ಮೂರು ದಿನದ ಸಂತೆ
ಸಂತೆ ಮುಗಿದ ಗಳಿಗೆ
ಹೊರಡಲೇಬೇಕು ತಿರುಗಿ
ಬಂದ ಜಾಗದೆಡೆಗೆ...

ಅದಕೆ ದುಡಿಯಬೇಕು,
ದುಡಿಸಬೇಕು ಈ ದೇಹವ..
ನನಗಾಗಿ, ಜೊತೆಗೇ ಪರಹಿತಕೆ
ಅಣ್ಣ ಬಸವಣ್ಣ ಹೇಳಿದಂತೆ...

ಕಾಯಕ ಯಾವುದಾದರೇನು..
ಮೇಲು- ಕೀಳಿಲ್ಲ ಎಂದರಿತವ ನಾನು
ಪಾದಗಳ ರಕ್ಷಣೆ ಮಾಡುವ
ಪಾದರಕ್ಷೆಗಳ ಹೊಲಿಯುವ ಭಾಗ್ಯವಂತ ನಾನು...

ಅಕ್ಕ ಹೇಳಿಲ್ಲವೇ ಮರುಳೆ
ಕಾಯ ಕಂದಿದರೇನು, ಮಿಂಚಿದರೇನು..
ಕಾಯಕದಿ ಬಂದದ್ದು ಮಾತ್ರ



ಹಮೀದಾಬೇಗಂ ದೇಸಾಯಿ.ಸಂಕೇಶ್ವರ.

# ಬೆಳದಿಂಗಳೂಟ



ಹೆಸರು ಕೇಳಿದರೆ ಮನಸ್ಸು ಅಯಾಚಿತವಾಗಿ ಬಾಲ್ಯದ ನೆನಪುಗಳ ದಿಬ್ಬಣಕ್ಕೆ ಕರೆದೊಯ್ಯುಬಿಡುತ್ತದೆ. ಚಿಕ್ಕಂದಿನಲ್ಲಿ ರಜೆಯ ದಿನಗಳು ಬಂದಾಗ ಮನೆಗೆ ನೆಂಟರು ಬಂದಾಗ ಮಧ್ಯೆ ಹುಣ್ಣಿಮೆ ಬಂತೆಂದರೆ ಅಂದು ಬೆಳದಿಂಗಳೂಟ ಗ್ಯಾರಂಟಿ. ಸಾಮಾನ್ಯವಾಗಿ ಬಿಸಿಬೇಳೆ ಬಾತ್ ಅಥವಾ ಬೇರೆ ಯಾವುದಾದರೂ ಕಲಸನ್ನ ಗಸಗಸೆ ಪಾಯಸ ಮೊಸರನ್ನ ಕಂಪಲ್ಸರಿ ಆಂಬೊಡೆ ಮದ್ದೂರು ವಡೆಯೋ ಬಜ್ಜಿಗಳೋ ಯಾವುದಾದರೂ 1. ಅಡುಗೆ ಮಾಡಿ 8ಗಂಟೆಯ ವೇಳೆಗೆ ಹಿತ್ತಲಲ್ಲಿ ಹಾಸಿದ ಜಮಖಾನದ ಮೇಲೆ ತೆಗೆದುಕೊಂಡು ಹೋಗಿ ಇಟ್ಟರೆ ಯಾವಾಗ ತಿನ್ನುವೆವು ಎಂಬ ಕಾತರ. 7ಗಂಟೆಯಿಂದಲೇ ಅಲ್ಲಿ ಬೀಡು ಬಿಟ್ಟಿರುತ್ತಿದ್ದ ನಾವುಗಳು ಅಂತ್ಯಾಕ್ಷರಿ word building ಅಲ್ಲದೆ ಹಾಡುಗಳನ್ನು ಹೇಳುತ್ತಾ ಕಾಲ ಕಳೆಯುತ್ತಿದ್ದು ಎಲ್ಲರೂ ಸೇರಿದ ನಂತರ ಕೈತುತ್ತು ಅಥವಾ ತಟ್ಟೆಗಳಲ್ಲಿ ಹಾಕಿಸಿಕೊಂಡು ತಿನ್ನುತ್ತಿದ್ದದ್ದು.

ಮಾಮೂಲಿಗಿಂತ ಒಂದೆರಡು ತುತ್ತು ಹೆಚ್ಚೇ ಇಳಿಯುತ್ತಿತ್ತು ಬಿಡಿ. ಹೊಸದಾಗಿ ಮದುವೆಯಾದ ಜೋಡಿಗಳಿಗೆ ಔತಣಕ್ಕೆ ಕರೆದಾಗ ಗರ್ಭಿಣಿ ಹೆಂಗಸರನ್ನು ಊಟಕ್ಕೆ ಕರೆದಾಗ ಕೆಲವೊಮ್ಮೆ ಹುಟ್ಟುಹಬ್ಬಗಳು ಹುಣ್ಣಿಮೆಯ ಆಸುಪಾಸಿನಲ್ಲೇ ಇದ್ದಾಗಲೆಲ್ಲ ಬೆಳದಿಂಗಳೂಟಕ್ಕೊಂದು ನೆಪ. ಹುಣ್ಣಿಮೆಯ ಹಿಂದಿನ 2ದಿನಗಳು ಹಾಗೂ ನಂತರದ 2ದಿನಗಳು ಸಹ ಇದಕ್ಕೆ ತುಂಬ ಪ್ರಶಸ್ತ ವಾಗಿದ್ದವು. ಇನ್ನು ಅಜ್ಜಿಯ ಮನೆಗೆ ಹೋದಾಗಲಂತೂ ದಿನರಾತ್ರಿ ಬಿಸಿಲುಮಚ್ಚಿನ ಊಟವೇ...ನಾವು ಮಕ್ಕಳಿಗೆ ಹಿರಿಯರು ಯಾರಾದರೊಬ್ಬರು ರಾತ್ರಿ ಕೈತುತ್ತು ಹಾಕುತ್ತಿದ್ದುದು ದಿನದ ಅಭ್ಯಾಸ. ಈ ರೀತಿಯ ಬೆಳದಿಂಗಳೂಟಕ್ಕೆ ಹಿರಿಯರು ಭಾಗವಹಿಸುತ್ತಿದ್ದುದು ವಿಶೇಷ ಅಲ್ಲದೆ ದಿನ ನಿತ್ಯದ ಅಡುಗೆಯಲ್ಲದೆ ವಿಶೇಷ ಅಡಿಗೆ ಮತ್ತು ಸಿಹಿಗಳು ಇರುತ್ತಿದ್ದದ್ದು ಮತ್ತೊಂದು ವಿಶೇಷ.

ಊಟವಾದ ನಂತರ ಎಷ್ಟೋ ಹೊತ್ತಿನವರೆಗೆ ಎಲೆಯಡಿಕೆ ಹಾಕಿಕೊಂಡು ಲೋಕಾಭಿರಾಮ ಪಟ್ಟಾಂಗ ದೊಡ್ಡವರು ಹೊಡೆಯುತ್ತಿದ್ದರೆ ನಾವು ಮಕ್ಕಳು ವಿವಿಧ ಆಟಗಳನ್ನಾಡುತ್ತ ಕಾಲಕಳೆಯುತ್ತಿದ್ದೆವು. ಅಂತೂ ನಿದ್ರೆ ಅವತ್ತು ಮಧ್ಯರಾತ್ರಿಯ ನಂತರವೇ. ಮಹಡಿಯ ಮನೆ ಹಾಗೂ ತಾರಸಿಗಳು ಸ್ವಲ್ಪ ಅಪರೂಪವಾಗಿದ್ದವು ಆಗ ನಾವು ಚಾಮುಂಡಿಪುರಂನಲ್ಲಿ ನ ಬಾಡಿಗೆ ಮನೆಯಲ್ಲಿ ಇದ್ದ ಸಮಯ. ಮತಾರದ ಮನೆ. ತೀರಾ ಮಡಿಯವರನ್ನು ಬಿಟ್ಟರೆ ಮಿಕ್ಕವರೆಲ್ಲ ಸೇರಿ ಆಗಾಗ ಈ ರೀತಿಯ ಬೆಳದಿಂಗಳ ಊಟವನ್ನು ಆಯೋಜಿಸುತ್ತಿದ್ದದು ವಾಡಿಕೆ.

ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ರೀತಿಯ ಅಡುಗೆ ಮಾಡಿ ತಂದು ಹಂಚಿ ತಿನ್ನುತ್ತಿದ್ದ ಆ ಕಾಲದ ಸೊಗಸೇ ಬೇರೆ ಬಿಡಿ ಈಗ ಅದು "ಪಾಟ್ ಲಕ್" ಅನ್ನೋ ಹೆಸರಿನಲ್ಲಿ ಪ್ರಸಿದ್ಧ. ಇನ್ನು ತಾರಸಿ ಮನೆಗಳು ಇದ್ದರೂ ನಾವು ವಿಶ್ವೇಶ್ವರ ನಗರದಲ್ಲಿದ್ದಾಗ ಎಲ್ಲರ ಮನೆಗೂ ಮೇಲೆ ಹತ್ತಿ ಹೋಗಲು ಮೆಟ್ಟಿಲುಗಳಿರಲಿಲ್ಲ. ಒಬ್ಬರ ಮನೆಯಲ್ಲಿ ಮಾತ್ರ ಆ ಸೌಲಭ್ಯ. ಹಾಗಾಗಿ ಅವರ ಮನೆಯಲ್ಲೇ ಪ್ರತಿ ಬೆಳದಿಂಗಳೂಟ ಖಾಯಂ. ಎಲ್ಲರ ಮನೆಯಲ್ಲಿ ಬೇರೆ ಬೇರೆ ವಿವಿಧ ಅಡುಗೆಗಳನ್ನು ಮಾಡಿಕೊಂಡು ಹೋಗಿ ಅಲ್ಲಿ ಕುಳಿತು ಹಂಚಿ ತಿಂದು ನಂತರ ಎಲ್ಲರೂ ಸೇರಿ ಜಾಗವನ್ನು ಸ್ವಚ್ಛ ಮಾಡಿ ಕೊಟ್ಟು ಬರುತ್ತಿದ್ದ ನೆನಪು ಇನ್ನೂ ಹಚ್ಚ ಹಸಿರು. ಅಲ್ಲಿಯೂ ಅಷ್ಟೇ ಬೇರೆಯವರ ಮನೆಯದನ್ನು ತಿನ್ನದಿದ್ದರೆ ಅವರ ಮನೆಯದನ್ನು ಮಾತ್ರ ತಿನ್ನುತ್ತಿದ್ದರು.

ಆದರೆ ಹಂಚಿ ಜತೆಯಲ್ಲಿ ಎಲ್ಲರೊಡನೆ ಬೆರೆಯಲು ಮಾತ್ರ ಯಾವ ಅಡ್ಡಿ ಆತಂಕವೂ ಇರಲಿಲ್ಲ. ಎಲ್ಲರಿಗೂ ಏನೋ ಸಂಭ್ರಮ 2 ದಿನ ಮುಂಚಿನಿಂದಲೇ ಕಾತರದಿಂದ ಕಾಯುತ್ತಿದ್ದ ಕಾಲ ಅದು. ಪ್ರೇಮಿಗಳ ನವವಧುವರರ ಏಕಾಂತದ ಬೆಳದಿಂಗಳೂಟದ ಸವಿ ಬಲ್ಲವರೆ ಬಲ್ಲರು. ಪದಗಳಲ್ಲಿ ಅದನ್ನು ಹಿಡಿದಿಡಲಾಗೋಲ್ಲ ! ಬಾಯಿಗೆ ರುಚಿಯಾದ ತಿನಿಸು, ಪ್ರಿಯ ಬಂಧು ಮಿತ್ರರ ಒಡನಾಟದ ಸೊಗಸು ,ತುಂಬು ತಿಂಗಳನು ಮೊಗೆದು ಕುಡಿಯುವ ಮನಸ್ಸು ಇವೆಲ್ಲಕ್ಕೂ ಬೆಳದಿಂಗಳೂಟ ಒಂದೇ ಮಾರ್ಗ.

ದೊಡ್ಡ ದೊಡ್ಡ ರೆಸಾರ್ಟ್ ಗಳಲ್ಲಿ ಈಗ ಬೆಳದಿಂಗಳೂಟದ ಪರಿಕಲ್ಪನೆ ಬರುತ್ತಿದೆಯಂತೆ. ಅಷ್ಟೊಂದು ಹಣ ಕೊಟ್ಟು ಅಲ್ಲಿ ಹೋಗುವ ಬದಲು ನಮ್ಮಳತೆಯಲ್ಲಿ ನಮ್ಮಿಷ್ಟದ ಬಂಧುಮಿತ್ರರ ಜೊತೆ ಹುಣ್ಣಿಮೆಯ ಚಂದ್ರನ ಸೊಬಗನ್ನು ಸವಿಯಲು ನಾವೇಕೆ ಮನಸ್ಸು ಮಾಡಬಾರದು? ಈಗ ಸಾಮಾನ್ಯ ಎಲ್ಲರ ಮನೆಗಳಲ್ಲೂ ಮಹಡಿ ಇರುತ್ತದೆ. ಬೆಳದಿಂಗಳು ಧಾರಾಳವಾಗಿ ಬಿದ್ದಿರುತ್ತದೆ. ಆದರೆ ಅದನ್ನು ಆಸ್ವಾದಿಸುತ್ತಾ ಬೆಳದಿಂಗಳೂಟ ಮಾಡುವ ಮನಸ್ಸು ವ್ಯವಧಾನ ಸಮಯ ಇಲ್ಲದೆ ಹೋಗುತ್ತಿದೆ. ಚಿಕ್ಕ ಚಿಕ್ಕ ವಿಷಯಗಳಲ್ಲೂ ಸಂತಸವನ್ನು ಕಾಣುವ ಬದುಕನ್ನು ಆಸ್ವಾದಿಸುವ ಕಲೆಯನ್ನು ನಮ್ಮ ಹಿರಿಯರು ಅರಿತಿದ್ದರು ಎಂಬುದಕ್ಕೆ ಈ ಬೆಳದಿಂಗಳೂಟದ ಪದ್ಧತಿಯೇ ಸಾಕ್ಷಿ.

ಒತ್ತಡ ಕೆಲಸ ಸಂಪಾದನೆಯ ಹಿಂದೆ ನಾಗಾಲೋಟ ಇವುಗಳ ಮಧ್ಯೆ ನಾವು ಜೀವನ ಕಲೆಯನ್ನು ಸೊಬಗನ್ನು ಅನುಭವಿಸುತ್ತಿಲ್ಲ . ಅದಕ್ಕೆ ಹಿಂದೆಯೇ ಕುವೆಂಪು ಅವರು ಹೇಳಿರುವುದು "ಸೊಬಗನಾಸ್ವಾದಿಸಲೆಮಗೆ ಸಮಯವಿಲ್ಲ" ಎಂದು. ಲೇಟ್ ನೈಟ್ ಪಾರ್ಟಿ ಎಂದು ಪಾನಗೋಷ್ಠಿಗಳನ್ನು ನಡೆಸುವ ಬದಲು ಇಡೀ ಕುಟುಂಬದವರು ಸೇರಿ ಮನೆಯಲ್ಲಿಯೇ ಈ ತರಹದ ಕಾರ್ಯಕ್ರಮಗಳನ್ನು ಆಯೋಜಿಸಿ ಕೊಳ್ಳಬಾರದೇಕೆ? ಇಂದಿನ ವೇಗದ ಬದುಕಿನಲ್ಲಿ ಎಲ್ಲರಿಗೂ ನಾವೇ ಅಡುಗೆ ಮಾಡಲು ಸಾಧ್ಯವಿಲ್ಲದಿದ್ದರೆ ಹೊರಗಿನಿಂದ ತರಿಸಬಹುದು ಇಲ್ಲ ಒಬ್ಬೊಬ್ಬರು ಒಂದೊಂದು ಬಗೆ ಮಾಡಿದರೆ ಯಾರಿಗೂ ಹೆಚ್ಚಿನ ಶ್ರಮ ಎನಿಸುವುದಿಲ್ಲ .ಆರೋಗ್ಯಕ್ಕೂ ಕಿಸೆಗೂ ಹಗುರ ತಾನೆ ? ಹಾಗಾದರೆ ...ಇನ್ನೇನು ಹುಣ್ಣಿಮೆ ಬಂತು ಯಾರ ಮನೆಯಲ್ಲಿ ಕಾರ್ಯಕ್ರಮ ಆಯೋಜನೆ? ಇಲ್ಲ ಎಲ್ಲರೂ ನಮ್ಮ ಮನೆಗೇ ಬಂದುಬಿಡಿ ಸ್ವಾಗತ ?.



ಸುಜಾತಾ ರವೀಶ್ ಮೈಸೂರು

# ಅಮೆರಿಕ–ಇರಾನ್ 14 ಅಂಶಗಳ ಒಪ್ಪಂದಕ್ಕೆ ಅಂಕಿತ

**ಅ.ಶ. ಸುದ್ದಿ ವಾಷಿಂಗ್ಟನ್**

**ವಾಷಿಂಗ್ಟನ್: ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಅಂತ್ಯ ಹಾಡಲು ಜಾಗತಿಕ ವ್ಯಾಪಾರ ಮಹತ್ವದ ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವುದು ಸೇರಿದಂತೆ 14 ಅಂಶಗಳ ಒಪ್ಪಂದಕ್ಕೆ ಅಂಕಿತ ಹಾಕಿವೆ. ಈ ಒಪ್ಪಂದದಿಂದಾಗಿ ಉಭಯ ದೇಶಗಳ ನಡುವೆ ನಡೆಯುತ್ತಿದ್ದ ಸೇನಾ ಕಾರ್ಯಾಚರಣೆ ಅಂತ್ಯಗೊಂಡಿದೆ. ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸುವುದು ಆರ್ಥಿಕ ನಿರ್ಬಂಧ ತೆರವು ಇರಾನ್ ಪರಮಾಣು ಯೋಜನೆ ಕುರಿತು ಮಾತುಕತೆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು 60 ದಿನಗಳ ಪ್ರಕ್ರಿಯೆ ಪ್ರಾರಂಭಿಸುವುದು ಈ ಒಪ್ಪಂದದ ಮುಖ್ಯ ಉದ್ದೇಶವಾಗಿದೆ.**

ಪ್ಯಾರಿಸ್, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರನ್ನು ಭೇಟಿ ಮಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಿನ್ನೆ ಒಪ್ಪಂದ ಕರಡು ಪ್ರತಿಗೆ ಸಹಿ ಹಾಕಿದ್ದಾರೆ ಎಂದು ಶ್ವೇತ ಭವನದ ಅಧಿಕಾರಿಯೊಬ್ಬರು ಹೇಳಿರುವುದನ್ನು ಉಲ್ಲೇಖಿಸಿ ಖಾಸಗಿ ಸುದ್ದಿ ವರದಿ ಮಾಡಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಒಪ್ಪಂದಕ್ಕೆ ಸಹಿ ಮಾಡಿರುವುದ–ರಿಂದ ಇದು ತಕ್ಷಣದಿಂದಲ್ಲೇ ಜಾರಿಗೆ ಬಂದಿದೆ.

ಅಮೆರಿಕ ಮತ್ತು ಇರಾನ್ ನಡುವಿನ ಒಪ್ಪಂದ ವ್ಯವಸ್ಥಿತ ಚೌಕಟ್ಟಿನೊಳಗೆ ನಡೆದಿದ್ದು, ತಕ್ಷಣದಿಂದಲೇ ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸಿ, ಇರಾನ್‌ನ ಯುರೇನಿಯಂ ದಾಸ್ತಾನು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು



ಹಾಗೂ ಒಪ್ಪಂದದ ನಿಯಮಗಳಿಗೆ ಇರಾನ್ ಬದ್ಧವಾಗಿರುವುದನ್ನು ಆಧರಿಸಿ ಹಂತ ಹಂತವಾಗಿ ಆರ್ಥಿಕ ಪರಿಹಾರಗಳನ್ನು ಕಂಡುಕೊಳ್ಳಲು ಅನುವು ಮಾಡಿಕೊಡಲಿದೆ ಎಂದು ಅಮೆರಿಕ ತಿಳಿಸಿದೆ. ಶಾಂತಿ ಒಪ್ಪಂದ ಕರಡು ಅಂತಿಮಗೊಳಿಸಿ, ಎರಡು ರಾಷ್ಟ್ರಗಳ ನಾಯಕರು ಅಂಕಿತ ಹಾಕಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ದೃಢಪಡಿಸಿದ್ದಾರೆ. ಹೊರ್ಮುಜ್ ಜಲಸಂದಿಯನ್ನು ಸಂಚಾರ ಮುಕ್ತಗೊಳಿಸುವ ಬಗ್ಗೆಯೂ ಒಮ್ಮತದ ನಿರ್ಧಾರಕ್ಕೆ ಬರಲಾಗಿದೆ.

ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್‌ನ ಸಾರ್ವಭೌಮತ್ವ ಮತ್ತು ಅಧಿಕಾರ ಎತ್ತಿಹಿಡಿದು ಸುರಕ್ಷಿತ ಕಡಲ ಸಂಚಾರವನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಹೇಳಿರುವ ಇಸ್ಮಾಯಿಲ್ ಈ 14 ಅಂಶಗಳ ಒಪ್ಪಂದವೂ ಲೆಬನಾನ್ ಸೇರಿದಂತೆ ಇತರೆಡೆ ಸೇನಾ ಕಾರ್ಯಾಚರಣೆಯನ್ನು ತಕ್ಷಣ ಮತ್ತು ಶಾಶ್ವತವಾಗಿ ನಿಲ್ಲಿಸಲು ಸೂಚಿಸುತ್ತದೆ. ಎರಡು ದೇಶಗಳ ಪರಸ್ಪರ ಒಪ್ಪಿಗೆಯೊಂದಿಗೆ ವಿಸ್ತರಿಸಬಹುದಾದ 60 ದಿನಗಳೊಳಗೆ ಅಂತಿಮ ಒಪ್ಪಂದವನ್ನು ತಲುಪಲು ಇರಾನ್ ಮತ್ತು ಅಮೆರಿಕ ಪ್ರತಿಜ್ಞೆ ಮಾಡಿದೆ ಎಂದರು.

ಇರಾನ್ ಮೇಲೆ ಅಮೆ–ರಿಕ ವಿಧಿಸಿರುವ ನಿರ್ಬಂಧಗಳನ್ನು ಹಂತ ಹಂತವಾಗಿ ಸಡಿಲಗೊಳಿಸುವುದು, ಮುಟ್ಟುಗೋಲು ಹಾಕಿಕೊಳ್ಳಲಾದ ಇರಾನ್ ಆಸ್ತಿ ಬಿಡುಗಡೆ, ಇರಾನ್ ತೈಲ ರಫ್ತುಗಳ ಮೇಲಿನ ಅಮೆರಿಕ ಹಣಕಾಸು ಇಲಾಖೆಯ ವಿನಾಯಿತಿಗಳು ಮತ್ತು ಇರಾನ್‌ಗಾಗಿ ಅಮೆರಿಕದ ಬೆಂಬಲದೊಂದಿಗೆ ಕನಿಷ್ಠ 300 ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಪುನರ್ ನಿರ್ಮಾಣ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮವು ಈ ಒಪ್ಪಂದದಲ್ಲಿ ಸೇರಿವೆ.

## ರಾಮನ ದೇಣಿಗೆ ಲೂಟಿ ಪ್ರಕರಣದ ವಿಚಾರಣೆ ತೀವ್ರಗೊಳಿಸಿದ ಎಸ್‌ಐಟಿ

**ಅ.ಶ. ಸುದ್ದಿ ಲಕ್ನೋ**

**ಲಕ್ನೋ: ಅಯೋಧ್ಯೆ ರಾಮಮಂದಿರ ದೇಣಿಗೆ ಲೂಟಿ ಪ್ರಕರಣದ ತನಿಖೆಯನ್ನು ಎಸ್‌ಐಟಿ ತೀವ್ರಗೊಳಿಸಿದೆ. ಇದುವರೆಗೂ ಟ್ರಸ್ಟ್ ಪದಾಧಿಕಾರಿಗಳು, ಸಿಬ್ಬಂದಿ ಸೇರಿ 42 ಜನರನ್ನು ವಿಚಾರಣೆಗೆ ಒಳಪಡಿಸಲಾಗಿದೆ. 2021ರಿಂದ ಇಲ್ಲಿಯವರೆಗಿನ ದಾಖಲೆಗಳ ಪರಿಶೀಲನೆ ಮಾಡಲಾಗಿದೆ. ಜೊತೆಗೆ, ನೇಮಕಾತಿ ಪ್ರಕ್ರಿಯೆ, ದೇಣಿಗೆ ಸ್ವೀಕರಿಸುವ ಸಿಬ್ಬಂದಿಯ ಪೂರ್ವಾಪರ ವಿಚಾರಿಸಿ, ಹೊಣೆಗಾರಿಕೆಗಳ ಬಗ್ಗೆ ಪರಾಮರ್ಶಿಸಿದೆ. ಜೊತೆಗೆ, ದೇಣಿಗೆ ವಿಭಾಗದ ಮುಖ್ಯವಾಗಿ ಹಣ ಎಣಿಕೆ ಹಾಗೂ ಉಸ್ತುವಾರಿ ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಂಡಿದೆ.**



ಇನ್ನೂ, ರಾಮಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಪ್ರತಿಕ್ರಿಯಿಸಿ, ಎಸ್‌ಐಟಿ ತನಿಖೆಗೆ ಸಂಪೂರ್ಣ ಸಹಕಾರ ನೀಡ್ತೇವೆ. ಅಂದಹಾಗೆ, ಎಸ್‌ಐಟಿಯು 7 ದಿನಗಳ ಒಳಗೆ ಪ್ರಾಥಮಿಕ ವರದಿ ಹಾಗೂ 15 ದಿನಗಳ ಒಳಗೆ ಅಂತಿಮ ವರದಿಯನ್ನು ಯೋಗಿ ಆದಿತ್ಯನಾಥ್ ಸರ್ಕಾರಕ್ಕೆ ಸಲ್ಲಿಸಬೇಕಿದೆ. ಮೂರು ದಿನಗಳಿಂದ ದೇವಾಲಯದಲ್ಲೇ ಬೀಡುಬಿಟ್ಟಿರುವ ಎಸ್‌ಐಟಿ ತಂಡ ರಾಮ ಮಂದಿರಕ್ಕೆ ಸಂಬಂಧಿಸಿದ 42 ಸಿಬ್ಬಂದಿಯನ್ನು ವಿಚಾರಣೆ ನಡೆಸಿದೆ. ಜೊತೆಗೆ ನಿರ್ಮಾಣ ಉಸ್ತುವಾರಿ ಗೋಪಾಲ್ ರಾವ್ ಅವರನ್ನು ಸಹ ವಿಚಾರಣೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಆನಂತರ ಶ್ರೀ ರಾಮ ಜನ್ಮಭೂಮಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರೊಂದಿಗೆ ಸಂವಹನ ನಡೆಸಿ, ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿದೆ. ಏನಿದು ಪ್ರಕರಣ?ರಾಮಮಂದಿರ ನಿರ್ಮಾಣದ ಸಂದರ್ಭದಲ್ಲಿ ಹಾಗೂ ಅದಾದ ಬಳಿಕ ದೇಣಿಗೆ ಲೂಟಿಯಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದವು. 2021ರಲ್ಲಿ ರಾಮಮಂದಿರ ಟ್ರಸ್ಟ್ ಖರೀದಿಸಿದ ಭೂಮಿಯ ಬೆಲೆಯಲ್ಲಿ ಭಾರಿ ವ್ಯತ್ಯಾಸವಿದೆ, ಕೆಲವೇ ನಿಮಿಷಗಳಲ್ಲಿ ಕೋಟ್ಯಂತರ ರೂಪಾಯಿ ಲಾಭ ಮಾಡಿಕೊಳ್ಳಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಆದರೆ ಟ್ರಸ್ಟ್ ಈ ಆರೋಪವನ್ನು ತಳ್ಳಿಹಾಕಿ, ಎಲ್ಲಾ ವ್ಯವಹಾರಗಳು ಪಾರದರ್ಶಕವಾಗಿ ಬ್ಯಾಂಕ್ ಮುಖಾಂತರವೇ ನಡೆದಿವೆ ಮತ್ತು ಮಾರುಕಟ್ಟೆ ದರದಲ್ಲೇ ಭೂಮಿ ಖರೀದಿಸಲಾಗಿದೆ ಎಂದು ಸ್ಪಷ್ಟನೆ ನೀಡಿತ್ತು. ಆನಂತರ ರಾಮಮಂದಿರದ ಹೆಸರಿನಲ್ಲಿ ಸಾರ್ವಜನಿಕರಿಂದ ಹಣ ಲೂಟಿ ಮಾಡಲು ಕೆಲವು ಸೈಬರ್ ವಂಚಕರು ನಕಲಿ ವೆಬ್‌ಸೈಟ್‌ಗಳು, ನಕಲಿ ಕ್ಯೂಆರ್ ಕೋಡ್ ಮತ್ತು ನಕಲಿ ಟ್ರಸ್ಟ್ ಖಾತೆಗಳನ್ನು ಸೃಷ್ಟಿಸಿದ್ದರು. ಈ ಮೂಲಕ ಮುಗ್ಧ ಭಕ್ತ–ರಿಂದ ಹಣ ವಸೂಲಿ ಮಾಡಲಾಗುತ್ತಿತ್ತು. ಇದರ ವಿರುದ್ಧ ಅಯೋಧ್ಯೆ ಪೊಲೀಸರು ಮತ್ತು ಸೈಬರ್ ಕ್ರೈಂ ವಿಭಾಗದವರು ಪ್ರಕರಣ ದಾಖಲಿಸಿಕೊಂಡು, ಹಲವು ವಂಚಕರನ್ನು ಈಗಾಗಲೇ ಬಂಧಿಸಿದ್ದಾರೆ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ತನಗೆ ಬಂದಿರುವ ಪ್ರತಿಯೊಂದು ರೂಪಾಯಿ ದೇಣಿಗೆಗೂ ಲೆಕ್ಕಪತ್ರವನ್ನು ಇಟ್ಟಿದ್ದು, ಯಾವುದೇ ಅಧಿಕೃತ ದೇಣಿಗೆ ಲೂಟಿಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ.

## ಅಡ್ಡ ಮತದಾನ ಮಾಡಿದ್ದರೆ ಸಾಬೀತು ಪಡಿಸಿ: ಜಿಟಿಡಿ ಸವಾಲು

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ನಾನು ಆತ್ಮಸಾಕ್ಷಿ ಅನುಗುಣವಾಗಿ ನಾನು ಮತ ಚಲಾಯಿಸಿದ್ದೇನೆ. ಅಡ್ಡ ಮತದಾನ ಮಾಡಿದ್ದೇನೆ ಎಂದು ಹೇಳುವವರು ಅದನ್ನು ಸಾಬೀತು ಪಡಿಸಲಿ ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ ಸವಾಲು ಹಾಕಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮಗೆ ಅನಾರೋಗ್ಯದ ಕಾರಣಕ್ಕಾಗಿ ಪಕ್ಷದ ಶಾಸಕರಗಿಂತಲೂ ಮೊದಲೇ ಮತದಾನ ಮಾಡಿದ್ದೇನೆ ಎಂದರು.**

ಜಿ.ಟಿ.ದೇವೇಗೌಡ ಅಡ್ಡ ಮತದಾನ ಮಾಡಿದ್ದಾರೆ ಎಂದು ಹೇಳುವವರು ಅದನ್ನು ಸಾಬೀತು ಪಡಿಸಲಿ. ನಾನು ಆತ್ಮಸಾಕ್ಷಿ ಅನುಗುಣವಾಗಿ ಮತ ಚಲಾಯಿಸಿದ್ದೇನೆ. ರಹಸ್ಯ ಮತದಾನವಾಗಿರುವುದರಿಂದ ಯಾ–




ರಿಗೆ ಮತ ಹಾಕಿದ್ದೇನೆ ಎಂದು ಬಹಿರಂಗ ಪಡಿಸಲು ಸಾಧ್ಯವಿಲ್ಲ ಎಂದರು. ಜೆಡಿ–ಎಸ್‌ನ ಅಭ್ಯರ್ಥಿ ಗೋವಿಂದರಾಜ್ ಗೆದ್ದೇ ಗೆಲ್ಲುತ್ತಾರೆ. ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಗೋವಿಂದರಾಜ್ ಅವರನ್ನು ಗೆಲ್ಲಿಸಿಕೊಳ್ಳುವುದು ಗೊತ್ತಿದೆ ಎಂದರು.

ಜಿ.ಟಿ.ದೇವೇಗೌಡ ಅವರ ಪುತ್ರರೂ ಆಗಿರುವ ಹುಣಸೂರು ಕ್ಷೇತ್ರದ ಶಾಸಕ ಹ–ರೀಶ್‌ಗೌಡ ಅವರು ಜೆಡಿಎಸ್‌ನಲ್ಲಿ ಯಾರು ಅಡ್ಡ ಮತದಾನ ಮಾಡಿಲ್ಲ ಎಂದು ಪುನರುಚ್ಚ–ರಿಸಿದರು. ತಮ್ಮ ತಂದೆ ಜಿ.ಟಿ.ದೇವೇಗೌಡರವರೇ ಎನ್‌ಡಿಎ ಅಭ್ಯರ್ಥಿ ಗೆಲ್ಲುತ್ತಾರೆ ಎಂದು ಹೇಳಿದ ಮೇಲೆ ಅವರು ಅಡ್ಡ ಮತದಾನ ಮಾಡಿದ್ದಾರೆ ಎಂದು ಅನುಮಾನಿಸುವುದರಲ್ಲಿ ಅರ್ಥವಿಲ್ಲ. ಆತ್ಮಸಾಕ್ಷಿ ಅನುಗುಣವಾಗಿ ಮತ ಹಾಕಿದ್ದೇನೆ ಎಂದು ಯಾವ ಕಾರಣ–ಕ್ಕೆ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಈ ಬಗ್ಗೆ ಅವರೇ ಸ್ಪಷ್ಟಪಡಿಸಬೇಕು ಎಂದು ಹೇಳಿದರು.

## ಕ್ರೊಯೇಷಿಯಾ ಮಣಿಸಿದ ಇಂಗ್ಲೆಂಡ್ ಭರ್ಜರಿ ಗೆಲುವು



**ಅ.ಶ. ಸುದ್ದಿ ಆರ್ಲಿಂಗ್ಟನ್**

**ಆರ್ಲಿಂಗ್ಟನ್: ಕ್ರೊಯೇಷಿಯಾದ ಸ್ಟ್ರೈಕರ್ ಪೆಟರ್ ಮೂಸಾ ವಿಶ್ವಕಪ್‌ನಲ್ಲಿ ತಮ ಮೊದಲ ಗೋಲು ದಾಖಲಿಸಿದರೂ, ಅವರ ತಂಡ ಇಂಗ್ಲೆಂಡ್ ವಿರುದ್ಧ 4–2 ಅಂತರದ ಸೋಲು ಅನುಭವಿಸಿತು. ಪ್ರಸ್ತುತ ಎಫ್‌ಸಿ ಡಲ್ಲಾಸ್ ತಂಡದ ಪರ ಆಡುತ್ತಿರುವ ಮೂಸಾ, ಡಲ್ಲಾಸ್ ಪ್ರದೇಶದಲ್ಲಿ ಸಾಕಷ್ಟು ಗೋಲುಗಳನ್ನು ಗಳಿಸಿರುವ ಅನುಭವ ಹೊಂದಿದ್ದಾರೆ. ಇದೀಗ ಅವರು ಫುಟ್‌ಬಾಲ್‌ನ ಅತಿದೊಡ್ಡ ವೇದಿಕೆಯಾದ ವಿಶ್ವಕಪ್‌ನಲ್ಲೂ ಗೋಲು ದಾಖಲಿಸುವ ಮೂಲಕ ಗಮನ ಸೆಳೆದಿದ್ದಾರೆ.**

ಪಂದ್ಯದಲ್ಲಿ ಮೊದಲಾರ್ಧದ ಹೆಚ್ಚುವರಿ ಸಮಯದ ಕೊನೆಯ ಕ್ಷಣದಲ್ಲಿ ಮೂಸಾ ಸಮಬಲದ ಗೋಲು ಗಳಿಸಿದರು. ಇದರೊಂದಿಗೆ ವಿಶ್ವಕಪ್‌ನಲ್ಲಿ ಯುರೋಪಿನ ತಂಡದ ಪರ ಗೋಲು ಗಳಿಸಿದ ಮೂರನೇ ಮೇಜರ್ ಲೀಗ್ ಸಾಕರ್ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪಂದ್ಯದ ಬಳಿಕ ಮಾತನಾಡಿದ ಮೂಸಾ, ತವರಿನಂತಿರುವ ಈ ಮೈದಾನದಲ್ಲಿ ಗೋಲು ಗಳಿಸಿದ್ದು ಅದ್ಭುತ ಅನುಭವ. ಆದರೆ ಪಂದ್ಯದಲ್ಲಿ ಸೋತಿರುವುದರಿಂದ ಸಂತೋಷವಿಲ್ಲ. ಸೋಲಿನ ಬಳಿಕ ಸಂಭ್ರಮಿಸಲು ಹೆಚ್ಚು ಏನೂ ಇಲ್ಲ ಎಂದು ಹೇಳಿದರು.

28 ವರ್ಷದ ಮೂಸಾ ಈ ಮೂಲಕ ಡಲ್ಲಾಸ್ ಪ್ರದೇಶದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಗಳಿಸಿದ ಗೋಲುಗಳ ಸಂಖ್ಯೆಯನ್ನು 32ಕ್ಕೆ ಏರಿಸಿಕೊಂಡರು. ಈ ಋತುವಿನಲ್ಲಿ ನಲ್ಲಿ 12 ಗೋಲುಗಳೊಂದಿಗೆ ಅವರು ಲಿಯೋನೆಲ್ ಮೆಸ್ಸಿಅವರೊಂದಿಗೆ ಜಂ–ಟಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ. ಅಮೆರಿಕದ ಲೀಗ್‌ನಲ್ಲಿ ಅವರ ಒಟ್ಟು ಗೋಲುಗಳ ಸಂಖ್ಯೆ 46ಕ್ಕೆ ತಲುಪಿದೆ. ಪಂದ್ಯದಲ್ಲಿ ಕ್ರೊಯೇಷಿಯಾ 2–1 ಹಿನ್ನಡೆಯಲ್ಲಿದ್ದಾಗ, ಮಾರಿಯೊ ಪಸಾಲಿಚ್ ನೀಡಿದ ಪಾಸ್ ಅನ್ನು ಇವಾನ್ ಪೆರಿಸಿಚ್ ಹೆಡರ್ ಮೂಲಕ ಮೂಸಾಗೆ ತಲುಪಿಸಿದರು.

ಚೆಂಡು ನೆಲಕ್ಕೆ ಬೀಳುವ ಮುನ್ನವೇ ಮೂಸಾ ಅದನ್ನು ಗೋಲಾಗಿ ಪರಿವರ್ತಿಸಿ, ಇಂಗ್ಲೆಂಡ್ ಗೋಲ್‌ಕೀಪರ್ ಜೋರ್ಡನ್ ಪಿಕ್‌ಫೋರ್ಡ್ ಅವರನ್ನು ಮಣಿಸಿದರು. ಗೋಲು ಆದ ತಕ್ಷಣವೇ ಮೊದಲಾರ್ಧದ ಅಂತ್ಯಕ್ಕೆ ಸೀಟಿ ಮೊಳಗಿತು. ಆದರೆ ಎರಡನೇರ್ಧ ಆರಂಭವಾಗಿ ಕೇವಲ ಎರಡು ನಿಮಿಷಗಳಲ್ಲಿ ಜೂಡ್ ಬೆಲ್ಲಿಂಗ್ಹ್ಯಾಮ್ ಇಂಗ್ಲೆಂಡ್‌ಗೆ ಮುನ್ನಡೆ ತಂದುಕೊಡುವ ಗೋಲುಗಳಿಸಿದರು.


ಬಳಿಕ 66ನೇ ನಿಮಿಷದಲ್ಲಿ ಕ್ರೊಯೇಷಿಯಾ ಕೋಚ್ ಝ್ಲಾಟ್ಕೊ ಡಾಲಿಕ್ ಅವರು ಮೂಸಾ ಬದಲಿಗೆ ಇಗೋರ್ ಮತಾನೋವಿಚ್ ಅವರನ್ನು ಕಣಕ್ಕಿಳಿಸಿದರು. ಈ ಕುರಿತು ಪ್ರತಿಕ್ರಿಯಿಸಿದ ಮೂಸಾ, ಕೋಚ್ ಅವರೇ ಮುಖ್ಯಸ್ಥರು. ನಿರ್ಧಾರ ಅವರದ್ದು. ಸಾಕಷ್ಟು ಓಡಿದ್ದರಿಂದ ನಾನು ಆಯಾಸಗೊಂಡಿದ್ದೆಎಂದರು. ಇಂಗ್ಲೆಂಡ್ ಭರ್ಜರಿ ಗೆಲುವಿನೊಂದಿಗೆ ಅಂಕ ಪಟ್ಟಿಯಲ್ಲಿ ಮೇಲೇರಿದೆ.

## ದಳಪತಿ ಬರ್ತ್‌ಡೇ ಸ್ಪೇಷಲ್, ಮೃಗಾಲಯಗಳಿಗೆ ಉಚಿತ ಎಂಟ್ರಿ

**ಅ.ಶ. ಸುದ್ದಿ ಚೆನ್ನೈ**

**ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಅವರ ಜನ್ಮದಿನದ ಅಂಗವಾಗಿ ಸಾರ್ವಜನಿಕರಿಗೆ ಮೃಗಾಲಯಗಳಿಗೆ ಉಚಿತ ಪ್ರವೇಶ ನೀಡಲು ನಿರ್ಧರಿಸಲಾಗಿದೆ. ರಾಜ್ಯ ಸರ್ಕಾರ ಜೂನ್ 21 ಮತ್ತು 22 ರಂದು ಪ್ರಾಣಿಶಾಸ್ತ್ರೀಯ ಉದ್ಯಾನವನಗಳಲ್ಲಿ ಪ್ರವೇಶ ಶುಲ್ಕವನ್ನು ವಿನಾಯಿತಿ ನೀಡುವುದಾಗಿ ಘೋಷಿಸಿದೆ.**

ಈ ಕ್ರಮವನ್ನು ಪ್ರಕಟಿಸಿದ ಸಚಿವ



ರಂಜಿತ್ ಕುಮಾರ್ ಅವರು, ಯುವ ಸಂದರ್ಶಕರ ಆನಂದಕ್ಕಾಗಿ ಈ ಉಪಕ್ರಮವನ್ನು ವಿಶೇಷವಾಗಿ ಆಯೋಜಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಮಕ್ಕಳು ನಮಗೆ ದೇವರಿದ್ದಂತೆ. ಅವರ ಸಂತೋಷಕ್ಕಾಗಿ ನಾವು ಇದನ್ನು ವ್ಯವಸ್ಥೆ ಮಾಡಿದ್ದೇವೆ ಎಂದು ಸಚಿವರು ಹೇಳಿದರು. ಮುಖ್ಯಮಂತ್ರಿಗಳ ಜನ್ಮದಿನವು ಜೂನ್ 22 ರಂದು ಬರುತ್ತದೆ ಮತ್ತು ಎರಡು ದಿನಗಳ ವಿನಾಯಿತಿ ಆಡಳಿತದ ಸಂಭ್ರಮಾಚರಣೆಯ ಕ್ರಮಗಳ ಭಾಗವಾಗಿದೆ.

## ದ್ವಿಚಕ್ರ ವಾಹನ ಸವಾರರಿಗೆ ಗುಡ್ ನ್ಯೂಸ್: ಭಾರತದಲ್ಲೇ ಶುರುವಾಗಲಿದೆ ‘ಬ್ರೈಕ್ ಎಬಿಎಸ್’ ಉತ್ಪಾದನೆ

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ಭಾರತ ವಿಶ್ವದಲ್ಲೇ ಅತಿದೊಡ್ಡ ದ್ವಿಚಕ್ರ ವಾಹನ ಮಾರುಕಟ್ಟೆಯಾಗಿದ್ದು, ಇಲ್ಲಿ ಬರೋಬ್ಬರಿ 2.5 ಕೋಟಿಗೂ ಅಧಿಕ ನೋಂದಾಯಿತ ವಾಹನಗಳಿವೆ. ದಿನದಿಂದ ದಿನಕ್ಕೆ ಈ ಬೈಕ್‌ಗಳಲ್ಲಿ ಸುರಕ್ಷತಾ ಫೀಚರ್‌ಗಳ ಬೇಡಿಕೆ ಹೆಚ್ಚಾಗುತ್ತಿದೆ. ಇದನ್ನು ಮನಗಂಡಿರುವ ಜಾಗತಿಕ ಬ್ರೇಕಿಂಗ್ ತಂತ್ರಜ್ಞಾನದ ದೈತ್ಯ ಕಂಪನಿ ‘ಬ್ರೆಂಬೊ’ ಮತ್ತು ಚೀನಾದ ಖ್ಯಾತ ಕಂಪನಿ ‘ನಿಂಗ್ಬೊ ಸೇಫ್ ಬ್ರೇಕ್ಸ್ ಸಿಸ್ಟಮ್ಸ್’, ಭಾರತದಲ್ಲಿ ಜಂಟಿ ಕಾರ್ಯಾಚರಣೆಗೆ ಮುಂದಾಗಿವೆ.**

ಭಾರತೀಯ ಮಾರುಕಟ್ಟೆಗೆಂದೇ ವಿಶೇಷವಾಗಿ ಮೋಟಾರ್‌ಸೈಕಲ್ ಎಬಿಎಸ್ (ಆಂಟಿ–ಲಾಕ್ ಬ್ರೇಕಿಂಗ್ ಸಿಸ್ಟಮ್) ಗಳನ್ನು ಉತ್ಪಾದಿಸಲು ಈ ಎರಡೂ ಕಂಪನಿಗಳು ಒಪ್ಪಂದಕ್ಕೆ ಸಹಿ ಹಾಕಿದ್ದು, ‘ಃಖಖಈ ಆಕ್ಟೀವ್ ಸೇಫ್ಟಿ ಸೊಲ್ಯೂಷನ್ಸ್’ ಎಂಬ ಹೊಸ ಕಂಪನಿಯನ್ನು ಸ್ಥಾಪಿಸಿವೆ. ಹೇಗಿರಲಿದೆ ಪಾಲುದಾರಿಕೆ ಈ ಹೊಸ ಜಂಟಿ ಒಪ್ಪಂದದಲ್ಲಿ ಇಟಲಿ ಮೂಲದ ‘ಬ್ರೆಂಬೊ’ ಸಂಸ್ಥೆಯು



ಶೇ.60ರಷ್ಟು ಬಹುಪಾಲು ಷೇರನ್ನು ಹೊಂದಿರಲಿದೆ. ಭಾರತದ ಪ್ರಮುಖ ಆಟೋಮೊಬೈಲ್ ಕೈಗಾ–ರಿಕಾ ಕೇಂದ್ರವಾಗಿರುವ ಪುಣೆಯ ‘ಚಾಕನ್’ನಲ್ಲಿ (ಬ್ರೆಂಬೊ ಇಂಡಿಯಾ ಘಟಕದ ಪಕ್ಕದಲ್ಲೇ) ಈ ನೂತನ ಉತ್ಪಾದನಾ ಘಟಕ ತಲೆ ಎತ್ತಲಿದೆ.

ಅತ್ಯಾಧುನಿಕ ಹಾಗೂ ಸ್ವಯಂಚಾಲಿತ ಯಂತ್ರಗಳ ಮೂಲಕ ಇಲ್ಲಿ ಎಬಿಎಸ್ ಅಸೆಂಬ್ಲಿ ಮಾಡಲಾಗುತ್ತದೆ. ಆರಂಭದಲ್ಲಿ ಸುಮಾರು 50 ಜನರಿಗೆ ಉದ್ಯೋಗಾವಕಾಶ ಸಿಗಲಿದ್ದು, ಉತ್ಪಾದನೆ ಹೆಚ್ಚಾದಂತೆ ಉದ್ಯೋಗಿಗಳ ಸಂಖ್ಯೆಯೂ ಹೆಚ್ಚಾಗಲಿದೆ. ಸಿಂಗಲ್ ಮತ್ತು ಡ್ಯುಯಲ್–ಚಾನೆಲ್ ಎಬಿ–ಎಸ್ ಉತ್ಪಾದನೆ : ಈ ಘಟಕದಲ್ಲಿ ಭಾರತೀಯ ಮಾರುಕಟ್ಟೆಯ ಅಗತ್ಯಗಳಿಗೆ ತಕ್ಕಂತೆ ‘ಸಿಂಗಲ್–ಚಾನೆಲ್’ ಮತ್ತು ‘ಡ್ಯುಯಲ್–ಚಾನೆಲ್’ ಎಬಿ–ಎಸ್ ಸಿಸ್ಟಮ್‌ಗಳನ್ನು ತಯಾರಿಸಿ ದ್ವಿಚಕ್ರ ವಾಹನ ಕಂಪನಿಗಳಿಗೆ ಪೂರೈಸಲಾಗುತ್ತದೆ. ಈಗಾಗಲೇ ಭಾರತದಲ್ಲಿ ಬ್ರೆಂಬೊ ಸಂಸ್ಥೆ ‘ಃಜ–ಃಖಇ’ ಬ್ರ್ಯಾಂಡ್‌ನಡಿ ಬ್ರೇಕಿಂಗ್ ಪರಿಹಾರಗಳನ್ನು ನೀಡುತ್ತಿದ್ದು, ಜನಪ್ರಿಯತೆ ಗಳಿಸಿದೆ.

ಈ ಹೊಸ ಎಬಿಎಸ್ ಸಿಸ್ಟಂಗಳು ಇದನ್ನು ಮತ್ತಷ್ಟು ಬಲಪಡಿಸಲಿದೆ. ಭವಿಷ್ಯದಲ್ಲಿ ಭಾರತದ ರಸ್ತೆ ಸುರಕ್ಷತಾ ನಿಯಮಗಳು ಬದಲಾದಂತೆ, ಅದಕ್ಕೆ ತಕ್ಕಂತೆ ಅತ್ಯಾಧುನಿಕ ತಂತ್ರಜ್ಞಾನವನ್ನು ಪರಿಚಯಿಸಲೂ ಈ ಜಂಟಿ ಸಂಸ್ಥೆ ಸಿದ್ಧತೆ ಮಾಡಿಕೊಂಡಿದೆ. ಬ್ರೆಂಬೊ ಮೋಟಾರ್‌ಸೈಕಲ್ ವಿಭಾಗದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಆಂಡ್ರಿಯಾ ಪಗನೆಸ್ಸಿ ಮಾತನಾಡಿ, “ಭಾರತದಲ್ಲಿ ಬೈಕ್ ಸುರಕ್ಷತಾ ಮಾನದಂಡಗಳನ್ನು ಮೇಲ್ದರ್ಜೆಗೇರಿಸುವ ನಮ್ಮ ಬದ್ಧತೆಯನ್ನು ಈ ಪಾಲುದಾರಿಕೆ ಪ್ರತಿಬಿಂಬಿಸುತ್ತದೆ. ಸ್ಥಳೀಯ ಉತ್ಪಾದನೆಯಲ್ಲಿ ಹೂಡಿಕೆ ಮಾಡುವ ಮೂಲಕ, ಆಧುನಿಕ ಬ್ರೇಕಿಂಗ್ ಪರಿಹಾರಗಳನ್ನು ನಾವು ಮಾರುಕಟ್ಟೆಗೆ ತರುತ್ತೇವೆ,” ಎಂದಿದ್ದಾರೆ.

ನಿಂಗ್ಬೊ ಸೇಫ್ ಬ್ರೇಕ್ಸ್ ಸಿಸ್ಟಮ್ಸ್‌ನ ಸಂಸ್ಥಾಪಕ ಹಿಲ್ ಶಾನ್ ಪ್ರತಿಕ್ರಿಯಿಸಿ, “ಬ್ರೆಂಬೊ ಜೊತೆಗೂಡಿ, ಭಾರತೀಯ ಬೈಕ್ ಮಾರುಕಟ್ಟೆಯ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಲು, ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯ ಮೇಲೆ ಗಮನ ಕೇಂದ್ರೀಕರಿಸಿ ಉತ್ಪಾದನಾ ವೇದಿಕೆಯನ್ನು ನಾವು ಸ್ಥಾಪಿಸುತ್ತಿದ್ದೇವೆ,” ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ, ಈ ಎರಡು ಬಲಿಷ್ಠ ಕಂಪನಿಗಳ ಒಕ್ಕೂಟದಿಂದಾಗಿ ಭಾರತೀಯ ಬೈಕ್ ಮಾರುಕಟ್ಟೆಯಲ್ಲಿ ಉನ್ನತ ದರ್ಜೆಯ ಬ್ರೇಕಿಂ–ಗ್ ತಂತ್ರಜ್ಞಾನ ಲಭ್ಯವಾಗಲಿದ್ದು, ಅಪಘಾತಗಳನ್ನು ತಡೆಯುವಲ್ಲಿ ಇದು ಬಹುದೊಡ್ಡ ಪಾತ್ರ ವಹಿಸಲಿದೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka